# ಅನಂತ ಜನಶಕ್ತಿ

ಸಂಪಾದಕ: ಎಸ್.ವೆಂಕಟೇಸುಲು
EDITOR : S VENKATESULU

ANANTHA JANA SAKTHI  KANNADA DAILY  ಕನ್ನಡ ದಿನಪತ್ರಿಕೆ

ಸಂಪುಟ : 01  ಸಂಚಿಕೆ : 62  ರಿ.ನಂ : ಕೆಎನ್‌ಎಎನ್ / 26 / ಎ5487  ಬಳ್ಳಾರಿ  ಶನಿವಾರ  ದಿನಾಂಕ : 12-09-2026  ಪುಟ : 04  ಬೆಲೆ : 2-00


## ದಸರಾ ಚಲನಚಿತ್ರೋತ್ಸವ ರದ್ದು, ಸಂಸದ ಒಡೆಯರ್ ಆಕ್ರೋಶ




ಮೈಸೂರು: ಯುವ ದಸರಾ, ರೈತ ದಸರಾ, ಮಕ್ಕಳ ದಸರಾ, ಕ್ರೀಡಾ ದಸರಾ ಹೀಗೆ ಮೈಸೂರು ದಸರಾವನ್ನ ಹತ್ತು ಹಲವು ರೀತಿಯಲ್ಲಿ ಆಚರಿಸಲಾಗುತ್ತದೆ. ಈ ಪೈಕಿ ದಸರಾ ಚಲನಚಿತ್ರೋತ್ಸವ ಕೂಡ ಪ್ರಮುಖವಾದ್ದು. ಆದರೆ, ಈ ಬಾರಿಯ ಮೈಸೂರು ದಸರಾ 2026ರ ಮಹೋತ್ಸವದಲ್ಲಿ ದಸರಾ ಚಲನಚಿತ್ರೋತ್ಸವವನ್ನ ರಾಜ್ಯ ಸರ್ಕಾರ ರದ್ದುಗೊಳಿಸಿದ್ದು, ಸಿನಿಪ್ರೇಮಿಗಳು ಮತ್ತು ಸ್ಯಾಂಡಲ್‌ವುಡ್ ವಲಯದಲ್ಲಿ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ. ಮೈಸೂರು ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ ರೆಡ್ಡಿ ಪ್ರಕಾರ, ಕಳೆದ ಐದು ವರ್ಷಗಳ ದತ್ತಾಂಶವನ್ನು ಪರಿಶೀಲಿಸಿದಾಗ ಚಿತ್ರೋತ್ಸವಕ್ಕೆ ಸಾರ್ವಜನಿಕರಿಂದ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ. ಜೊತೆಗೆ, ಪ್ರತಿ ವರ್ಷ ಚಲನಚಿತ್ರೋತ್ಸವ ಆಯೋಜಿಸಲು ಸುಮಾರು 40 ರಿಂದ 45 ಲಕ್ಷದವರೆಗೆ ಖರ್ಚು ಮಾಡಲಾಗುತ್ತಿತ್ತು. ಆದರೆ, ಮಲ್ಟಿಪ್ಲೆಕ್ಸ್ ಹಾಗೂ

4ನೇ ಪುಟಕ್ಕೆ...

## ರಾಜಕೀಯ ನಿವೃತ್ತಿ ಹೇಳಿಕೆ ಬೇಡ: ಸಿದ್ದುಗೆ ರಾಹುಲ್ ಸಲಹೆ



ನವದೆಹಲಿ: ರಾಜಕೀಯ ನಿವೃತ್ತಿ ಕುರಿತು ಸಾರ್ವಜನಿಕವಾಗಿ ಪದೇಪದೇ ಹೇಳಿಕೆ ನೀಡದಂತೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮಹತ್ವದ ಸಲಹೆ ನೀಡಿದ್ದಾರೆ. ದೆಹಲಿ ಭೇಟಿ ವೇಳೆ ರಾಹುಲ್ ಗಾಂಧಿ ಅವರನ್ನು ಭೇಟಿಯಾದ ಸಿದ್ದರಾಮಯ್ಯ ಅವರೊಂದಿಗೆ ರಾಜ್ಯ ರಾಜಕೀಯ ವಿದ್ಯಮಾನಗಳ ಕುರಿತು ಚರ್ಚಿಸಲಾಯಿತು. ಈ ವೇಳೆ ರಾಜಕೀಯ ನಿವೃತ್ತಿ ಬಗ್ಗೆ ಸಾರ್ವಜನಿಕವಾಗಿ ಪದೇಪದೇ ಮಾತನಾಡುವುದರಿಂದ ಪಕ್ಷದ ಕಾರ್ಯಕರ್ತರಲ್ಲಿ ಗೊಂದಲ ಮೂಡುವುದರ ಜೊತೆಗೆ ಸಾರ್ವಜನಿಕ ವಲಯಕ್ಕೂ ತಪ್ಪು ಸಂದೇಶ ರವಾನೆಯಾಗುವ ಸಾಧ್ಯತೆ ಇದೆ.

ಆದ್ದರಿಂದ ಮುಂದಿನ ದಿನಗಳಲ್ಲಿ ಇಂತಹ ಬಹಿರಂಗ ಹೇಳಿಕೆಗಳನ್ನು ನೀಡದಿರುವುದು ಸೂಕ್ತ ಎಂದು ರಾಹುಲ್ ಗಾಂಧಿ ಸಲಹೆ ನೀಡಿರುವ ವಿಚಾರ ಮೂಲಗಳಿಂದ ತಿಳಿದು ಬಂದಿದೆ. ರಾಹುಲ್ ಗಾಂಧಿ ಅವರ ಸಲಹೆಗೆ ಸಕಾರಾತ್ಮಕವಾಗಿ ಉತ್ತರಿಸಿದ ಸಿದ್ದರಾಮಯ್ಯ, ತಮ್ಮ ಹೇಳಿಕೆಯ ಹಿಂದಿನ ಸ್ಪಷ್ಟ ಉದ್ದೇಶವನ್ನು ವಿವರಿಸಿದ್ದಾರೆ. ನಾನು ಚುನಾವಣಾ ರಾಜಕೀಯದಿಂದ ನಿವೃತ್ತಿಯಾಗುವ ಕುರಿತಷ್ಟೇ

4ನೇ ಪುಟಕ್ಕೆ...

## ಗೌರಿ-ಗಣೇಶ ಹಬ್ಬಕ್ಕೂ ಮುನ್ನ ಕುಸಿದ ಚಿನ್ನ-ಬೆಳ್ಳಿ ದರ



ಬೆಂಗಳೂರು : ಗೌರಿ-ಗಣೇಶ ಹಬ್ಬಕ್ಕೂ ಮುನ್ನ ಚಿನ್ನ ಮತ್ತು ಬೆಳ್ಳಿ ದರದಲ್ಲಿ ಇಳಿಕೆಯಾಗಿದೆ. ಒಂದು ಕೆ.ಜಿ. ಬೆಳ್ಳಿ ದರದಲ್ಲಿ 10 ಸಾವಿರ ರೂ. ಕುಸಿತವಾಗಿದ್ದರೆ, ಚಿನ್ನದ ದರ ಒಂದು ಗ್ರಾಂಗೆ 262 ರೂ.ವರೆಗೆ ಇಳಿಕೆಯಾಗಿದ್ದು, ಗ್ರಾಹಕರಿಗೆ ಕೊಂಚ ಸಮಾಧಾನ ತಂದಿದೆ.

ಕಳೆದ ಎಂಟು ಹತ್ತು ದಿನಗಳಿಂದ ಏರಿಳಿತ ಕಾಣುತ್ತಿರುವ ಚಿನ್ನ ಮತ್ತು ಬೆಳ್ಳಿ ದರಗಳು ಮತ್ತೆ ಕುಸಿದಿವೆ. ಆಗಸ್ಟ್‌ನಲ್ಲಿ ಏರಿಳಿತ ಕಂಡಿದ್ದರೂ, ಸೆಪ್ಟೆಂಬರ್‌ನಲ್ಲಿ ಚಿನ್ನಬೆಳ್ಳಿ ದರಗಳು ಹೆಚ್ಚಿನ ಮಟ್ಟದಲ್ಲಿಯೇ ಮುಂದುವರಿದಿವೆ.

# ಸಿದ್ದರಾಮಯ್ಯ ದೆಹಲಿ ಭೇಟಿಗೂ ಅಸಮಾಧಾನಕ್ಕೂ ಸಂಬಂಧವಿಲ್ಲ: ಡಿಸಿಎಂ ಪರಮೇಶ್ವರ್ ಸ್ಪಷ್ಟನೆ



ಬೆಂಗಳೂರು: ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ಅವರು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಡಿ.ಕೆ. ಶಿವಕುಮಾರ್ ನೇತೃತ್ವದ ಸರ್ಕಾರದ 100 ದಿನಗಳ ಕಾರ್ಯಕ್ರಮದಿಂದ ದಿಢೀರ್ ನಿರ್ಗಮಿಸಿ ಬಳಿಕ ದೆಹಲಿಗೆ ತೆರಳಿರುವುದಕ್ಕೂ ಕಾಂಗ್ರೆಸ್‌ನೊಳಗಿನ ಅಸಮಾಧಾನಕ್ಕೂ ಯಾವುದೇ ಸಂಬಂಧವಿಲ್ಲ ಎಂದು ಶುಕ್ರವಾರ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಹೈಕಮಾಂಡ್ ತೆಗೆದುಕೊಳ್ಳುವ ನಿರ್ಧಾರಕ್ಕೆ ಬದ್ಧನಾಗಿರುತ್ತೇನೆ ಎಂದು ಸಿದ್ದರಾಮಯ್ಯ ಅವರು ಈ ಹಿಂದೆಯೇ ಸ್ಪಷ್ಟಪಡಿಸಿದ್ದರು. ಅದರಂತೆ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ ಎಂದು ಹೇಳಿದರು.

ಸಿದ್ದರಾಮಯ್ಯ ಅವರಿಗೆ ಅಸಮಾಧಾನವಿದ್ದಿದ್ದರೆ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿರಲಿಲ್ಲ. ಅದು ಮುಗಿದ ಅಧ್ಯಾಯ. ಅದನ್ನು ಪದೇಪದೆ ಚರ್ಚಿಸುವ ಅಗತ್ಯವಿಲ್ಲ ಎಂದು ತಿಳಿಸಿದರು.

ಗುರುವಾರ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ 'ದೃಢ ಕರ್ನಾಟಕದ ಸಂಕಲ್ಪ' ಕಾರ್ಯಕ್ರಮ ಆರಂಭವಾದ ಕೆಲವೇ ಸಮಯದಲ್ಲಿ ಸಿದ್ದರಾಮಯ್ಯ ಅವರು ಅಲ್ಲಿಂದ ನಿರ್ಗಮಿಸಿದ್ದರು.

ಬಳಿಕ ಅವರು ದೆಹಲಿಗೆ ತೆರಳಿದ್ದು, ರಾಜ್ಯದ ಇತ್ತೀಚಿನ ರಾಜಕೀಯ ಬೆಳವಣಿಗೆಗಳು

2ನೇ ಪುಟಕ್ಕೆ...

# ಜಾರಕಿಹೊಳಿ ಏನು ತಪ್ಪು ಮಾಡಿಲ್ಲ: ಡಿಕೆಶಿ




ಬೆಂಗಳೂರು: ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ತನ್ನ ಸಹೋದ್ಯೋಗಿ ಆಗಿದ್ದು, ಅವರು ಏನು ತಪ್ಪು ಮಾಡಿಲ್ಲ, ಕಾನೂನು ಚೌಕಟ್ಟಿನಲ್ಲಿ ವ್ಯವಹಾರ ಮಾಡಿದ್ದಾರೆ ಎಂದು ಸಿಎಂ ಡಿಕೆ ಶಿವಕುಮಾರ್ ಶುಕ್ರವಾರ ಹೇಳಿದ್ದಾರೆ.

ಮಾಧ್ಯಮದವರೊಂದಿಗೆ ಜಾರಕಿಹೊಳಿ ಭೇಟಿ ವಿಚಾರವಾಗಿ ಮಾತನಾಡಿದ ಅವರು, ಅವರು ನನ್ನ ಸಹೋದ್ಯೋಗಿ. ಅವರು ಏನು ತಪ್ಪು ಮಾಡಿಲ್ಲ, ಕಾನೂನು ಚೌಕಟ್ಟಿನಲ್ಲಿ ವ್ಯವಹಾರ ಮಾಡಿದ್ದಾರೆ. ಹೊರಗಡೆ ಹೋಗಬಾರದು, ವ್ಯವಹಾರ ಮಾಡಬಾರದು

2ನೇ ಪುಟಕ್ಕೆ...

## ಆಪ್ತ ಮಿತ್ರ ಪುಟಿನ್‌ಗೆ ವಿಶೇಷ ಉಡುಗೊರೆ ನೀಡಿದ ಪ್ರಧಾನಿ ನರೇಂದ್ರ ಮೋದಿ



ನವದೆಹಲಿ: ನವದೆಯಲಿಯ ಭಾರತ್ ಮಂಟಪದಲ್ಲಿ ಬ್ರಿಕ್ಸ್ 2026 ಶೃಂಗಸಭೆಗೆ ಚಾಲನೆ ದೊರೆತಿದ್ದು, ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರನ್ನು ಭೇಟಿಯಾಗಿ ವಿಸ್ತೃತ ಮಾತುಕತೆ ನಡೆಸಿದರು.

ಈ ಮಾತುಕತೆ 2030ರ ವೇಳೆಗೆ ವಾರ್ಷಿಕ ದ್ವಿಪಕ್ಷೀಯ ವ್ಯಾಪಾರವನ್ನು 100 ಶತಕೋಟಿ ಡಾಲರ್‌ಗೆ ಹೆಚ್ಚಿಸುವುದು ಹಾಗೂ ರಕ್ಷಣೆ, ಇಂಧನ ಮತ್ತು ಪ್ರಮುಖ ಖನಿಜಗಳ ವಲಯದಲ್ಲಿ ಸಹಕಾರವನ್ನು ಮತ್ತಷ್ಟು ಬಲಪಡಿಸುತ್ತದೆ ಎಂದು ವಿಶ್ಲೇಷಿಸಲಾಗುತ್ತಿದೆ. ಬ್ರಿಕ್ಸ್ ಶೃಂಗಸಭೆಯಲ್ಲಿ ಭಾಗವಹಿಸಲು ಮೂರು ದಿನಗಳ ಭೇಟಿಗಾಗಿ ಪುಟಿನ್ ಶುಕ್ರವಾರ ಬೆಳಿಗ್ಗೆ ನವದೆಹಲಿಗೆ ಆಗಮಿಸಿದರು. ಈಗಾಗಲೇ ಬಲವಾಗಿರುವ ರಕ್ಷಣಾ ಸಹಕಾರವನ್ನು ಮತ್ತಷ್ಟು ವಿಸ್ತರಿಸುವ ಕುರಿತು ಉಭಯ ನಾಯಕರು ಚರ್ಚಿಸುವ ನಿರೀಕ್ಷೆಯಿದೆ.

ಸಭೆಗೂ ಮುನ್ನ, ಮೋದಿ ಅವರು ಪುಟಿನ್ ಅವರಿಗೆ ಪ್ರಾಚೀನ ತಮಿಳು ಕೃತಿಯಾದ 'ತಿರುಕ್ಕುರಲ್'ನ ರಷ್ಯನ್ ಭಾಷಾಂತರವನ್ನು ಉಡುಗೊರೆಯಾಗಿ ನೀಡಿದರು.

ಉಭಯ ದೇಶಗಳು ಬ್ರಹ್ಮೋಸ್ ಕ್ಷಿಪಣಿಗಳ ಉನ್ನತೀಕರಣದ ಕುರಿತು ಪರಿಶೀಲಿಸುತ್ತಿವೆ ಎಂದು ಕ್ರೆಮ್ಲಿನ್ ವಕ್ತಾರ ಡಿಮಿಟ್ರಿ ಪೆಸ್ಕೋವ್ ಮಂಗಳವಾರ ತಿಳಿಸಿದರು. ಅಲ್ಲದೆ, ಬಾಕಿ ಇರುವ ಎಸ್-400 ವ್ಯವಸ್ಥೆಯ ಪೂರೈಕೆಯನ್ನು ಪೂರ್ಣಗೊಳಿಸಲು ಮತ್ತು ಪ್ರಸ್ತಾವಿತ ಖಣ-57 ಯುದ್ಧ ವಿಮಾನಗಳ ಪೂರೈಕೆಯ ಕುರಿತು ಚರ್ಚಿಸಲು ಮಾಸ್ಕೋ ಬದ್ಧವಾಗಿದೆ ಎಂದು ಅವರು ಹೇಳಿದರು. ಉಭಯ ದೇಶಗಳ ನಡುವಿನ ಇಂಧನ ಸಂಬಂಧಗಳು ಬಲವಾಗಿವೆ ಎಂದು ರಷ್ಯಾದ ಅಧಿಕಾರಿ ತಿಳಿಸಿದರು. ಭಾರತವು ಹೊಸ ನಾಗರಿಕ ಪರಮಾಣು ರಿಯಾಕ್ಟರ್‌ಗಳನ್ನು ಸ್ಥಾಪಿಸುವ ಯೋಜನೆಗೆ ಸಂಬಂಧಿಸಿದಂತೆ ಮಾತುಕತೆ ನಡೆಸುವ ಕುರಿತು ಎರಡೂ ಕಡೆಯವರು ಪರಿಶೀಲಿಸುತ್ತಿದ್ದಾರೆ ಎಂದರು.

## 24.97 ಲಕ್ಷ ಮತದಾರರಿಗೆ ಬಿಗ್ ಶಾಕ್; ಎಸ್‌ಐಆರ್ ನೋಟಿಸ್ ಜಾರಿ!




ಬೆಂಗಳೂರು: ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣಾ ಕಾರ್ಯಕ್ರಮದ ಭಾಗವಾಗಿ 24.97 ಲಕ್ಷಕ್ಕೂ ಹೆಚ್ಚು ನೋಟಿಸ್‌ಗಳನ್ನು ಮತದಾರರಿಗೆ ನೀಡಲಾಗಿದೆ ಎಂದು ಮುಖ್ಯ ಚುನಾವಣಾಧಿಕಾರಿಗಳ ಕಚೇರಿ ಶುಕ್ರವಾರ ತಿಳಿಸಿದೆ.

ಸೆಪ್ಟೆಂಬರ್ 10ರ ಮಾಹಿತಿಯಂತೆ, ರಾಜ್ಯದ ಮತದಾರರ ಪಟ್ಟಿಯಲ್ಲಿ ಒಟ್ಟು 4,46,58,413 ಮತದಾರರಿದ್ದಾರೆ; ಇವರಲ್ಲಿ 2.21 ಕೋಟಿ ಪುರುಷರು, 2.24 ಕೋಟಿ

2ನೇ ಪುಟಕ್ಕೆ...

## ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಹೆಚ್ಚುತ್ತಿರುವ ಒತ್ತಡ: ಕಾಂಗ್ರೆಸ್ ಸರ್ಕಾರಕ್ಕೆ ಸತ್ವ ಪರೀಕ್ಷೆ!

ಬೆಂಗಳೂರು: ಡಿ.ಕೆ. ಶಿವಕುಮಾರ್ ನೇತೃತ್ವದ ಸರ್ಕಾರವು 100 ದಿನಗಳ ಆಡಳಿತ ಪೂರೈಸುತ್ತಿರುವಾಗ, ಪಂಚಾಯತ್‌ಗಳು, ಗ್ರೇಟರ್ ಬೆಂಗಳೂರು ಅಥಾರಿಟಿ ಮತ್ತು ಇತರ ನಗರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸುವಂತೆ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಮೇಲೆ ಒತ್ತಡ ಹೆಚ್ಚುತ್ತಿದೆ. ಹೊಸ ಸರ್ಕಾರಕ್ಕೆ ಇದು ಮೊದಲ ಪ್ರಮುಖ ಚುನಾವಣಾ ಸವಾಲಾಗಿರಲಿದೆ.

ಸುಮಾರು 6,000 ಗ್ರಾಮ ಪಂಚಾಯತ್‌ಗಳು, 239 ತಾಲೂಕು ಮತ್ತು 31 ಜಿಲ್ಲಾ ಪಂಚಾಯತ್‌ಗಳು ಹಾಗೂ ಬೆಂಗಳೂರಿನ ವ್ಯಾಪ್ತಿಯ ಐದು ನಿಗಮಗಳಿಗೆ ಚುನಾವಣೆಗಳು ನಡೆಯಬೇಕಿದೆ. ಮೈಸೂರು, ದಾವಣಗೆರೆ, ಮಂಗಳೂರು, ಶಿವಮೊಗ್ಗ ಮತ್ತು ತುಮಕೂರು ಮಹಾನಗರ ಪಾಲಿಕೆಗಳಿಗೂ ಚುನಾವಣೆಗಳು ಬಾಕಿ ಇವೆ.

ರಾಜ್ಯ ರಾಜಧಾನಿಯು ಕಳೆದ ಆರು ವರ್ಷಗಳಿಂದ ಚುನಾಯಿತ ಆಡಳಿತ ಮಂಡಳಿಯನ್ನು ಹೊಂದಿಲ್ಲ. ಸರ್ಕಾರವು



ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಐದು ನಿಗಮಗಳಾಗಿ ವಿಂಗಡಿಸಿದ್ದು, ಆದರೂ ಕೆಲವು ಸಮಸ್ಯೆಗಳು ಇನ್ನೂ ಬಗೆಹರಿದಿಲ್ಲ.

2ನೇ ಪುಟಕ್ಕೆ...

# ಸತೀಶ್ ಜಾರಕಿಹೊಳಿ ಮೇಲೆ ಇಡಿ ದಾಳಿಗೆ ಖಂಡನೆ

## ಕುರುಗೋಡಿನಲ್ಲಿ ಕಾಂಗ್ರೆಸ್ ಕಾರ್ಯಕರ್ತರಿಂದ ಬೃಹತ್ ಪಂಜಿನ ಮೆರವಣಿಗೆ



ಬಳ್ಳಾರಿ: ಸಚಿವ ಸತೀಶ್ ಜಾರಕಿಹೊಳಿ ಅವರ ಮೇಲೆ ಜಾರಿ ನಿರ್ದೇಶನಾಲಯ (ಇಡಿ) ದಾಳಿ ನಡೆಸಿರುವುದನ್ನು ಖಂಡಿಸಿ ಕಾಂಗ್ರೆಸ್ ಕಾರ್ಯಕರ್ತರು ಬಳ್ಳಾರಿ ಜಿಲ್ಲೆಯ ಕುರುಗೋಡು ಪಟ್ಟಣದಲ್ಲಿ ಶುಕ್ರವಾರ ರಾತ್ರಿ ಬೃಹತ್ ಪ್ರತಿಭಟನೆ ಹಾಗೂ ಪಂಜಿನ ಮೆರವಣಿಗೆ ನಡೆಸಿದರು. ಕಂಪ್ಲಿ ಶಾಸಕ ಜೆ.ಎನ್. ಗಣೇಶ್ ಅವರ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಕಾಂಗ್ರೆಸ್ ಮುಖಂಡರು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕೇಂದ್ರ ಸರ್ಕಾರ ಮತ್ತು ಜಾರಿ ನಿರ್ದೇಶನಾಲಯದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕುರುಗೋಡು ಪಟ್ಟಣದ ದೊಡ್ಡ ಬಸವೇಶ್ವರ ದೇವಸ್ಥಾನದಿಂದ ಆರಂಭವಾದ ಪಂಜಿನ ಮೆರವಣಿಗೆಯು ಪಟ್ಟಣದ ಪ್ರಮುಖ ಬೀದಿಗಳ ಮೂಲಕ ಸಾಗಿ ಮೇನ್ ಸರ್ಕಲ್ ತಲುಪಿತು. ಕೈಯಲ್ಲಿ ಪಂಜು ಹಿಡಿದು ಸಾಗಿದ ಕಾಂಗ್ರೆಸ್ ಕಾರ್ಯಕರ್ತರು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ಈ ಸಂದರ್ಭದಲ್ಲಿ ಸಚಿವ ಸತೀಶ್ ಜಾರಕಿಹೊಳಿ ಅವರನ್ನು ಗುರಿಯಾಗಿಸಿಕೊಂಡು ಕೇಂದ್ರ ತನಿಖಾ ಸಂಸ್ಥೆಯ ಮೂಲಕ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಆರೋಪಿಸಿದ ಕಾರ್ಯಕರ್ತರು, ರಾಜಕೀಯ ಪ್ರೇರಿತ ತನಿಖೆಗಳನ್ನು ನಡೆಸುವುದನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ಕಾಂಗ್ರೆಸ್ ಮುಖಂಡರು, ವಿರೋಧ ಪಕ್ಷದ ನಾಯಕರನ್ನು ಗುರಿಯಾಗಿಸಿಕೊಂಡು ಜಾರಿ ನಿರ್ದೇಶನಾಲಯ ಸೇರಿದಂತೆ ಕೇಂದ್ರ ತನಿಖಾ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಳ್ಳಲಾಗುತ್ತಿದೆ ಎಂದು ಆರೋಪಿಸಿದರು. ಕೇಂದ್ರ ಸರ್ಕಾರ ತನ್ನ ರಾಜಕೀಯ ವಿರೋಧಿಗಳನ್ನು ಹತ್ತಿಕ್ಕಲು ತನಿಖಾ ಸಂಸ್ಥೆಗಳನ್ನು ಬಳಸಿಕೊಳ್ಳುತ್ತಿದೆ ಎಂಬ ಆರೋಪವನ್ನು ಮುಂದಿಟ್ಟ ಅವರು, ತನಿಖಾ ಸಂಸ್ಥೆಗಳು ಯಾವುದೇ ರಾಜಕೀಯ ಒತ್ತಡಕ್ಕೆ ಒಳಗಾಗದೆ ಸ್ವತಂತ್ರವಾಗಿ ಕಾರ್ಯನಿರ್ವಹಿಸಬೇಕು ಎಂದು ಒತ್ತಾಯಿಸಿದರು.

ಸತೀಶ್ ಜಾರಕಿಹೊಳಿ ಅವರ ಮೇಲಿನ ಇಡಿ ದಾಳಿಯನ್ನು ಕಾಂಗ್ರೆಸ್ ಕಾರ್ಯಕರ್ತರು ತೀವ್ರವಾಗಿ ಖಂಡಿಸಿದರು.

3ನೇ ಪುಟಕ್ಕೆ..

## 'ಚೀನಾವನ್ನು ಪ್ರಶ್ನಿಸುವ ಧೈರ್ಯ ಮೋದಿಯವರಿಗಿಲ್ಲ': ಖರ್ಗೆ



ಬೆಂಗಳೂರು: ಬ್ರಿಕ್ಸ್ ಶೃಂಗಸಭೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ವಿದೇಶಾಂಗ ನೀತಿಯನ್ನು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಶುಕ್ರವಾರ ಪ್ರಶ್ನಿಸಿದ್ದಾರೆ. ಭಾರತೀಯ ರೂಪಾಯಿ ಕುರಿತಂತೆ ಸರ್ಕಾರ ನೀಡಿದ್ದ ಭರವಸೆಗಳನ್ನು ಈಡೇರಿಸುವಲ್ಲಿ ವಿಫಲವಾಗಿದೆ, ಚೀನಾದಿಂದ ಎದುರಾಗುತ್ತಿರುವ ಸವಾಲುಗಳಿಗೆ ಸಮರ್ಪಕವಾಗಿ ಪ್ರತಿಕ್ರಿಯಿಸಿಲ್ಲ ಎಂದು ಅವರು ಆರೋಪಿಸಿದ್ದಾರೆ. ಸರ್ಕಾರದ ವಿದೇಶಾಂಗ ನೀತಿ ಸರಿಯಾದ ದಿಕ್ಕಿನಲ್ಲಿ ಸಾಗುತ್ತಿಲ್ಲ ಎಂದು ಕಾಣುತ್ತಿದೆ ಎಂದು ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ಪ್ರಧಾನಿ ಗುಜರಾತ್‌ನಲ್ಲಿ ಜೋಕಾಲಿಯಲ್ಲಿ ಕುಳಿತರು, ಮಹಾಬಲಿಪುರಂನಲ್ಲಿ ಮಾತುಕತೆ ನಡೆಸಿದರು. ಅದರ ನಂತರ ಏನಾಯಿತು? ಅವರು ಅರುಣಾಚಲ ಪ್ರದೇಶವನ್ನು ತಮ್ಮ ಭೂಭಾಗಕ್ಕೆ ಸೇರಿಸಿಕೊಳ್ಳುತ್ತಿದ್ದಾರೆ. ಭಾರತದ ಇತರ ಪ್ರದೇಶಗಳನ್ನೂ ತಮ್ಮದಾಗಿಸಿಕೊಳ್ಳುತ್ತಿದ್ದಾರೆ. ನಮ್ಮ ಗಡಿಯೊಳಗೆ ಗ್ರಾಮಗಳನ್ನು ನಿರ್ಮಿಸುತ್ತಿದ್ದಾರೆ. ಆದರೆ ಚೀನಾ ಸರ್ಕಾರ ಮಾಡುತ್ತಿರುವುದು ತಪ್ಪು ಎಂದು ಹೇಳುವಷ್ಟು ಧೈರ್ಯ ಪ್ರಧಾನಿಗೆ ಇಲ್ಲ ಏಕೆ ಎಂದು ಪ್ರಶ್ನಿಸಿದರು.

ಒಂದನೇ ಪುಟದಿಂದ..

## ಸಿದ್ದರಾಮಯ್ಯ ದೆಹಲಿ ಭೇಟಿಗೂ ಅಸಮಾಧಾನಕ್ಕೂ ಸಂಬಂಧವಿಲ್ಲ: ಡಿಸಿಎಂ ಪರಮೇಶ್ವರ್ ಸ್ಪಷ್ಟನೆ

ಹಾಗೂ ರಾಜ್ಯಪಾಲರಿಂದ ನಡೆಯಬೇಕಿರುವ ಐವರು ವಿಧಾನ ಪರಿಷತ್ ಸದಸ್ಯರ ನಾಮನಿರ್ದೇಶನದ ಕುರಿತು ಕಾಂಗ್ರೆಸ್‌ನ ಹಿರಿಯ ನಾಯಕರನ್ನು ಭೇಟಿಯಾಗಲಿದ್ದಾರೆ ಎಂಬ ಊಹಾಪೋಹಗಳು ಹರಡಿದ್ದವು.

ಈ ಹಿನ್ನೆಲೆಯಲ್ಲಿ ಮಾತನಾಡಿದ ಪರಮೇಶ್ವರ್ ಅವರು, ಸಿದ್ದರಾಮಯ್ಯ ಅವರು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರಾಗಿರುವುದರಿಂದ ದೆಹಲಿಗೆ ತೆರಳಿರುವುದು ಸಹಜ ವಿಚಾರ ಎಂದು ಹೇಳಿದರು. ದೆಹಲಿಗೆ ಭೇಟಿ ನೀಡಿರುವುದು ಸಹಜ. ಇದಕ್ಕೆ ಬೇರೆ ಯಾವುದೇ ಅರ್ಥ ಕಲ್ಪಿಸಬೇಕಿಲ್ಲ. ಅಧಿಕೃತ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ ಇಲ್ಲದಿರುವ ಸಂದರ್ಭದಲ್ಲಿ, ರಾಷ್ಟ್ರೀಯ ಹಾಗೂ ರಾಜ್ಯ ರಾಜಕೀಯ-ಕ್ಕೆ ಸಂಬಂಧಿಸಿದ ವಿಚಾರಗಳು, ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳು ಸೇರಿದಂತೆ ಹಲವು ವಿಷಯಗಳ ಕುರಿತು ಚರ್ಚಿಸಲು ಪಕ್ಷದ ದೆಹಲಿ ನಾಯಕತ್ವವು ಕಾರ್ಯಕಾರಿ ಸಮಿತಿ ಸದಸ್ಯರನ್ನು ಪ್ರತ್ಯೇಕವಾಗಿ ಕರೆಸಿಕೊಳ್ಳುವುದು ವಾಡಿಕೆ. ರಾಜ್ಯಪಾಲರಿಂದ ವಿಧಾನ ಪರಿಷತ್ ಸದಸ್ಯರ ನಾಮನಿರ್ದೇಶನದ ವಿಚಾರವೂ ಚರ್ಚೆಗೆ ಬರಬಹುದು ಎಂದು ತಿಳಿಸಿದರು.

ಡಿ.ಕೆ. ಶಿವಕುಮಾರ್ ನೇತೃತ್ವದ ಸರ್ಕಾರ 100 ದಿನಗಳನ್ನು ಪೂರ್ಣಗೊಳಿಸಿದ್ದು, ಹಲವು ಸವಾಲುಗಳನ್ನು ಎದುರಿಸುತ್ತಿದೆ. ಆದರೆ, ಸರ್ಕಾರ ಎಲ್ಲ ಸವಾಲುಗಳನ್ನು ಸಮರ್ಥವಾಗಿ ಎದುರಿಸಿ ಉತ್ತಮ ಆಡಳಿತ ನೀಡುವುದನ್ನು ಮುಂದುವರಿಸಲಿದೆ ಎಂದು ಹೇಳಿದರು.

ಇದೇ ವೇಳೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆಪ್ತರಾಗಿರುವ ಎಸ್. ರವಿ ಅವರು ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಕುರಿತು ಮಾತನಾಡಿದ ಅವರು, ಚುನಾವಣೆಯಲ್ಲಿ ಸ್ಪರ್ಧೆ ನಡೆಯುವುದಕ್ಕಿಂತ ಅವಿರೋಧ ಆಯ್ಕೆ ಮಾಡುವುದು ಕಾಂಗ್ರೆಸ್‌ನ ಉದ್ದೇಶವಾಗಿತ್ತು ಎಂದರು.

ನಮ್ಮ ಪಕ್ಷದ ನಿರ್ಧಾರವೇ ಅಧ್ಯಕ್ಷರನ್ನು ಅವಿರೋಧವಾಗಿ ಆಯ್ಕೆ ಮಾಡಬೇಕು, ಯಾವುದೇ ಚುನಾವಣೆ ನಡೆಯಬಾರದು ಎಂಬುದಾಗಿತ್ತು. ಅಂತಿಮ ಹಂತದಲ್ಲಿ ಎಸ್. ರವಿ ಅವರನ್ನು ಆಯ್ಕೆ ಮಾಡಲಾಯಿತು. ನಿರ್ಣಾಯಕ ಸಭೆಯಲ್ಲಿ ಕೆ.ಎನ್. ರಾಜಣ್ಣ ಅವರು ಉಪಸ್ಥಿತರಿದ್ದು, ಅವರ ಒಪ್ಪಿಗೆಯೊಂದಿಗೆ ನಿರ್ಧಾರ ಕೈಗೊಳ್ಳಲಾಗಿದೆ. ಹೀಗಾಗಿ ಅಸಮಾಧಾನದ ಪ್ರಶ್ನೆಯೇ ಇಲ್ಲ ಎಂದು ಹೇಳಿದರು. ಅಪೆಕ್ಸ್ ಬ್ಯಾಂಕ್ ಅಧ್ಯಕ್ಷ ಸ್ಥಾನಕ್ಕೆ ಎರಡೂವರೆ ವರ್ಷಗಳ ಅಧಿಕಾರ ಹಂಚಿಕೆ ವ್ಯವಸ್ಥೆ ಇದೆ ಎಂಬ ವರದಿಗಳ ಕುರಿತು ಹಾಗೂ ಕಾಂಗ್ರೆಸ್ ಅಧಿಕಾರ ಉಳಿಸಿಕೊಳ್ಳಲು ವಿಫಲವಾದರೆ ರಾಜಣ್ಣ ಅವರಿಗೆ ಅವಕಾಶ ತಪ್ಪಬಹುದೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಅಪೆಕ್ಸ್ ಬ್ಯಾಂಕ್ ಸ್ವತಂತ್ರ ಮತ್ತು ರಾಜಕೀಯೇತರ ಸಂಸ್ಥೆಯಾಗಿದ್ದು, ಅದರ ನಿರ್ದೇಶಕರ ಮಂಡಳಿಯೇ ಸೂಕ್ತ ನಿರ್ಧಾರ ಕೈಗೊಳ್ಳಲಿದೆ ಎಂದು ಹೇಳಿದರು.

ಇದೇ ವೇಳೆ, ಮನೆ ನಿವೇಶನವಿಲ್ಲದ ಮಾಜಿ ಸೈನಿಕರನ್ನೂ ಸರ್ಕಾರದ ನಿವೇಶನ ವಿತರಣೆ ಯೋಜನೆಯಲ್ಲಿ ಸೇರಿಸಲಾಗುವುದು ಎಂದು ತಿಳಿಸಿದರು. ಯೋಜನೆಯಡಿ ಪ್ರತಿ ಜಿಲ್ಲೆಯಲ್ಲಿ ಅರ್ಹ ಮನೆ ನಿವೇಶನವಿಲ್ಲದ ಫಲಾನುಭವಿಗಳಿಗೆ 30ಥ40 ಅಡಿ ಅಳತೆಯ 50,000 ನಿವೇಶನಗಳನ್ನು ವಿತರಿಸಲು ಉದ್ದೇಶಿಸಲಾಗಿದೆ. ಮೊದಲ ಹಂತದಲ್ಲಿ ಮುಂದಿನ ಎರಡು ತಿಂಗಳಲ್ಲಿ ರಾಜ್ಯಾದ್ಯಂತ ಐದು ಲಕ್ಷ ನಿವೇಶನಗಳನ್ನು ವಿತರಿಸಲಾಗುವುದು ಎಂದು ಹೇಳಿದರು.

## ವಿದ್ಯುತ್ ಕಡಿತ ಅನಿಯಮಿತ.. ಸಮಸ್ಯೆ ಅಪರಿಮಿತ...

### ಕರೆಂಟು ಬರೋದು ಯಾವಾಗ? ಹೋಗೋದು ಯಾವಾಗ? ತಿಳೀತಾನೇ ಇಲ್ಲ...!

ದಾವಣಗೆರೆ: ನಡು ಮಳೆಗಾಲದಲ್ಲೂ ತಾಪಮಾನವು ಅಂದಾಜು 34 ಡಿಗ್ರಿ ಸೆಲ್ಸಿಯಸ್ ತಲುಪಿದ್ದರಿಂದ ಸುಡು ಬಿಸಿಲಿನ ಅನುಭವ ಹೊಂದುತ್ತಿರುವ ಜಿಲ್ಲೆಯ ಜನತೆಗೆ, ಕೆಲವು ದಿನಗಳಿಂದ ಕಂಡುಬರುತ್ತಿರುವ ಅನಿಯಮಿತ ವಿದ್ಯುತ್ ಕಡಿತವು 'ಗಾಯದ ಮೇಲೆ ಬರೆ ಎಳೆದಂತೆ' ಎಂಬ ಗಾದೆ ನೆನಪು ಮಾಡುತ್ತಿದೆ.

ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ರೈತ ಸಮೂಹವನ್ನು ಅನಿಯಮಿತ ವಿದ್ಯುತ್ ಕಡಿತವು ಕಂಗೆಡಿಸಿದ್ದು, ಒಣಗುತ್ತಿರುವ ಬೆಳೆಗಳನ್ನು ರಕ್ಷಿಸಿಕೊಳ್ಳಲೂ ಆಗದೇ ಪರದಾಡುವಂತೆ ಮಾಡಿದೆ.

ಸೆಪ್ಟೆಂಬರ್ ಮೊದಲ ವಾರದಿಂದಲೇ ಬಿರು ಬೇಸಿಗೆಯನ್ನು ನೆನಪಿಸುತ್ತಿರುವ ಬಿಸಿಲಿನಿಂದಾಗಿ ಕಂಗೆಟ್ಟಿರುವ ಜನತೆಗೆ, 'ಮನೆಯಲ್ಲಿ ಇರುವುದಕ್ಕೆ ಫ್ಯಾನ್ ಅಥವಾ ಎ.ಸಿ. ಆನ್ ಮಾಡುವುದು ಅನಿವಾರ್ಯ' ಎಂಬ ಸ್ಥಿತಿ ನಿರ್ಮಾಣವಾಗಿದ್ದು, ಬೆಳಗಿನಜಾವದ ಸಿಹಿ ನಿದ್ರೆಯ ಸುಖ ಅನುಭವಿಸಲೂ ಅವಕಾಶ ಸಿಗದಂತೆ ವಿದ್ಯುತ್ ಕಡಿತವು ಕಾಡುತ್ತಿದೆ. ಫ್ಯಾನ್ ಆಫ್ ಆಯಿತು ಎಂಬ ಕೂಡಲೇ ಸೊಳ್ಳೆಗಳೂ ಎಚ್ಚರಗೊಂಡು 'ಸುಗ್ಗಿಯ ಕಾಲ ಬಂತು' ಎಂಬಂತೆ ನಿದ್ರೆಯಲ್ಲಿರುವವರ ಮೇಲೆ ನುಗ್ಗಿ ಬರುತ್ತಿವೆ.

'ಬೆಳಗಿನ ಜಾವ, ಬೆಳಿಗ್ಗೆ, ಮಧ್ಯಾಹ್ನ, ಮುಸ್ಸಂಜೆ, ರಾತ್ರಿ ಹಾಗೂ ಮಧ್ಯ ರಾತ್ರಿಯ ವೇಳೆಯಲ್ಲೂ ಇದ್ದಕ್ಕಿದ್ದಂತೆ ವಿದ್ಯುತ್ ಕೈಕೊಡುತ್ತಿದೆ. ಅರ್ಧ ಗಂಟೆ ಬಂದಂಗೆ ಮಾಡಿ, ಒಂದು ಗಂಟೆ ಮಾಯವಾಗುತ್ತಿದೆ. ಹೀಗೆಯೇ ದಿನದ 24 ಗಂಟೆಗಳಲ್ಲಿ ಹತ್ತಾರು ಸಲ ಆಗುತ್ತಿದೆ. ಇದರಿಂದಾಗಿ ಮನೆಯಲ್ಲಿ ಕುಳಿತುಕೊಳ್ಳಲೂ ಆಗುತ್ತಿಲ್ಲ' ಎಂದು ಹಿರಿಯ ಪತ್ರಕರ್ತ ಬಾ.ಮ. ಬಸವರಾಜಯ್ಯ ತಮ್ಮ ಅನುಭವ ಹೇಳಿಕೊಂಡರು.

'ಬೆಳಿಗ್ಗೆ ತಿಂಡಿಗಾಗಿ ದೋಸೆ ಜೊತೆಗೆ ಚಟ್ನಿ ಸಿದ್ಧಪಡಿಸಬೇಕು ಅನ್ನುವಷ್ಟರಲ್ಲಿ ಕರೆಂಟ್ ಹೋಗುತ್ತದೆ. ಮಿಕ್ಸಿಗೆ ಕೊಬ್ಬರಿ ಹಾಕಿ ಕಾದರೂ ಕರೆಂಟ್ ಬರುವುದಿಲ್ಲ. ಮಕ್ಕಳು ಶಾಲೆಗೆ, ಗಂಡ ಕೆಲಸಕ್ಕೆ ಹೋಗುವಷ್ಟರಲ್ಲಿ ತಿಂಡಿ ತಿನ್ನಿಸಿ, ಅಡುಗೆ



ಮಾಡಿ ಬಾಕ್ಸ್ ಕಟ್ಟಬೇಕೆಂದರೆ ಕರೆಂಟ್ ಇರುವುದಿಲ್ಲ. ಇದು ಕಳೆದ ಒಂದು ವಾರದಿಂದ ನಡೆಯುತ್ತಿರುವ ವಿದ್ಯಮಾನ' ಎಂದು ಮಹಿಳೆಯರು ಅಳಲು ತೋಡಿಕೊಳ್ಳುತ್ತಿದ್ದಾರೆ.

'ನಮ್ಮ ಮನೆಯಲ್ಲಿ ಕರೆಂಟ್ ಇಲ್ಲದಾಗ ವಿದ್ಯುದ್ದೀಪ ಬೆಳಗಲು, ಫ್ಯಾನ್ ಹಚ್ಚಲು ಯುಪಿಎಸ್ ಇಲ್ಲ. ಫ್ಯಾನ್, ಮಿಕ್ಸಿಗೆ, ಸ್ನಾನಕ್ಕೆ ನೀರು ಕಾಯಿಸಲು ಕ-ರೆಂಟೇ ಗತಿ. ಬೆಳ್ಳಂಬೆಳಗ್ಗೆ ಕರೆಂಟ್ ಇಲ್ಲದಿದ್ದರೆ ಕೈಕಾಲೇ ಆಡುವುದಿಲ್ಲ. ಯಾವ ಕೆಲಸವೂ ನಡೆಯುವುದಿಲ್ಲ' ಎಂದು ಮನೆಯೊಡತಿಯರು ಸಿಡಿಮಿಡಿಗೊಳ್ಳುವಂತಾಗಿದೆ.

ರೈತರನ್ನೂ ಕಾಡುತ್ತಿರುವ ಸಮಸ್ಯೆ: 'ಮಳೆಗಾಲದಲ್ಲಿ ಮಳೆಯೇ ಸುರಿಯುತ್ತಿಲ್ಲ. ಕಾಲುವೆಯಲ್ಲೂ ನೀರಿಲ್ಲ. ಬೆಳೆಗೆ ಕೊಳವೆಬಾವಿ ನೀರು ಹರಿಸಲು ಕರೆ-ಂಟ್ ಇರುವುದಿಲ್ಲ. ಮೇಲೆ ಬಿಸಿಲಿನ ತಾಪ ಬೇರೆ ಹೆಚ್ಚುತ್ತಿದ್ದು, ಬೇಸಿಗೆಯ ಅನುಭವ ನೀಡುತ್ತಿದೆ. ಬೆಳೆಗಳು ಒಣಗುತ್ತಿವೆ. ಬರಗಾಲದಲ್ಲಿ ಅಧಿಕ ಮಾಸ ಎಂಬಂತಾಗಿದೆ.

ನಮ್ಮ ಸಮಸ್ಯೆ ಯಾರ ಹತ್ರ ಹೇಳಿಕೊಳ್ಳಬೇಕು ಎಂಬುದೇ ತಿಳಿಯುತ್ತಿಲ್ಲ' ಎಂದು ಹರಿಹರ ತಾಲ್ಲೂಕಿನ ರಾಜನಹಳ್ಳಿಯ ರೈತ ಮಲ್ಲಾಡಿಹಳ್ಳಿ ರಾಜಣ್ಣ ಎದುರು ಅವಲತ್ತುಕೊಂಡರು.

'ಕರೆಂಟ್ ಯಾವಾಗ ಬರುತ್ತದೆ, ಯಾವಾಗ ಹೋಗುತ್ತದೆ ಎಂಬುದೇ ಗೊತ್ತಾಗುತ್ತಿಲ್ಲ. ಬೆಸ್ಕಾಂ ಸಿಬ್ಬಂದಿಯನ್ನು ಕೇಳಿದರೆ ನಮಗೂ ಗೊತ್ತಿಲ್ಲ ಎಂದು ಉತ್ತರ ನೀಡುತ್ತಾರೆ. ಹೀಗೇ ಕರೆಂಟ್ ಕೈಕೊಡುತ್ತಾ ಇದ್ದರೆ ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ ಎಂಬಂತೆ ನಮ್ಮ ಮೆಕ್ಕೆಜೋಳದ ಬೆಳೆಯೆಲ್ಲ ಒಣಗಿ ಹೋಗಲಿದೆ' ಎಂದು ಅವರು ಸಂಕಷ್ಟ ತೋಡಿ-ಕೊಂಡರು.

ಜನಸಾಮಾನ್ಯರು, ರೈತರು ಮಾತ್ರವಲ್ಲದೆ, ಚಿಕ್ಕಪುಟ್ಟ ವ್ಯಾಪಾರ ಮಾಡಲು ಹೋಟೆಲ್, ಅಂಗಡಿ ನಡೆಸುವವರನ್ನೂ ವಿದ್ಯುತ್ ಕಡಿತದ ಸಮಸ್ಯೆ ಕಾಡುತ್ತಿದೆ. ಒಳ್ಳೆಯ ವ್ಯಾಪಾರ ಆಗಬೇಕೆಂದರೆ ಮಧ್ಯಾಹ್ನ ನಮ್ಮ ಹೋಟೆಲ್‌ನಲ್ಲಿ ಫ್ಯಾನ್ ಹಚ್ಚಲೇಬೇಕು. ವಿದ್ಯುದ್ದೀಪ ಬೆಳಗಿಸಲೇಬೇಕು. ಕರೆ-ಂಟ್ ಕೈಕೊಟ್ಟರೆ ಗ್ರಾಹಕರು ಸುಳಿಯುವದಿಲ್ಲ ಎಂದು ಕೆಲವು ಹೋಟೆಲ್‌ಗಳ ಮಾಲೀಕರು ಹೇಳಿದರು.

ಬರಗಾಲ ಆವರಿಸಿದ್ದರಿಂದ ಮಳೆಗಾಲದಲ್ಲೇ ಈ ಸಮಸ್ಯೆ ಎದುರಾಗುತ್ತಿದೆ. ಇನ್ನು ಬೇಸಿಗೆ ಕಾಲದಲ್ಲಿ ಯಾವ ಸ್ಥಿತಿ ಕಾದಿದೆಯೋ? ಎಂಬ ಪ್ರಶ್ನೆ ಬಹುತೇಕರನ್ನು ಕಾಡುತ್ತಿದೆ.

ಸಾಮಾನ್ಯವಾಗಿ ಮಳೆಗಾಲದಲ್ಲಿ ವಿದ್ಯುತ್ ಬೇಡಿ-ಕೆ ತಗ್ಗುತ್ತಿತ್ತು. ಬರ ಪರಿಸ್ಥಿತಿ ಆವರಿಸಿದ್ದರಿಂದ ಕೃಷಿ ಪಂಪ್‌ಸೆಟ್‌ಗಳು ಕಾರ್ಯ ನಿರ್ವಹಿಸುತ್ತಿವೆ. ವಿದ್ಯುತ್‌ಗೆ ಫೆಬ್ರುವರಿಯಲ್ಲಿ ಇರುವಷ್ಟೇ ಬೇಡಿಕೆ ಸೆಪ್ಟೆಂಬರ್‌ನಲ್ಲೂ ಇದೆ ಎಂದು 'ಬೆಸ್ಕಾಂ' ಅಧೀಕ್ಷಕ ಎಂಜಿನಿಯರ್ ಎಸ್.ಕೆ. ಪಾಟೀಲ್ ತಿಳಿಸಿದರು.

'ಪ್ರಸ್ತುತ 350 ಮೆಗಾವಾಟ್ ವಿದ್ಯುತ್‌ಗೆ ಬೇಡಿ-ಕೆ ಇದೆ. ಇಷ್ಟು ವಿದ್ಯುತ್‌ಗೆ ಬೇಸಿಗೆ ಹಂಗಾಮಿನಲ್ಲಿ ಬೇಡಿಕೆ ಬರುತ್ತಿತ್ತು. ಪೂರೈಕೆಯಲ್ಲಿ ಕೊಂಚ ವ್ಯತ್ಯಾಸ ಉಂಟಾಗಿದ್ದು, ವಿದ್ಯುತ್ ಕಡಿತಕ್ಕೆ ಕಾರಣವಾಗಿದೆ. ಕೆಲವೇ ದಿನಗಳಲ್ಲಿ ಪರಿಹಾರ ಸಿಗಲಿದೆ' ಎಂದು ಮಾಹಿತಿ ನೀಡಿದರು.

## ಜಾರಕಿಹೊಳಿ ಏನು ತಪ್ಪು ಮಾಡಿಲ್ಲ

ಅಂತ ಎಲ್ಲಿದೆ? ಇದೆಲ್ಲ ರಾಜಕಾರಣ ಎಂದರು. ಇನ್ನೂ ಮೂರ್ನಾಲ್ಕು ಜನರ ಮೇಲೆ ದಾಳಿ ಮಾಡಬಹುದು. ಇಡೀ ಕಾಂಗ್ರೆಸ್ ಪಕ್ಷವನ್ನು ಟ್ರ್ಯಾಪ್ ಮಾಡೋದಕ್ಕೆ ತಯಾರಿ ಮಾಡ್ತಿದ್ದಾರೆ. ಬಿಜೆಪಿಯವರ ಮೇಲೆಲ್ಲೂ ಕೂಡ ದಾಳಿ ಮಾಡುತ್ತಿಲ್ಲ. ಸಮುದಾಯ ಮಾತ್ರ ಅಲ್ಲ. ಇಡೀ ಪಕ್ಷವನ್ನೇ ಟಾರ್ಗೆಟ್ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

ಇದೇ ವೇಳೆ ವಂದೇ ಮಾತರಂ ಗೀತೆ ಮೊಟಕು ವಿಚಾರವಾಗಿ ಮಾತನಾಡಿದ ಮುಖ್ಯಮಂತ್ರಿ, ವಂದೇ ಮಾತರಂ ಬಗ್ಗೆ ನಮ್ಮ ಪಕ್ಷದ ನಿಲುವು ಸ್ಪಷ್ಟವಾಗಿದೆ. ಅವರು ರಾಜಕೀಯ ಮಾಡ್ತಿದ್ದಾರೆ ಅಷ್ಟೇ ಎಂದರು.

ಇನ್ನೂ ಕಾನೂನು ಬಾಹಿರ ಬಂದೂಕು ಶರಣಾಗತಿಗೆ ಸೂಚನೆ ವಿಚಾರವಾಗಿ ಮಾತನಾಡಿದ ಡಿಕೆ ಶಿವಕುಮಾರ್, ಕಾನೂನು ಬಾಹಿರವಾಗಿ ಯಾರಾದರೂ ಬಂದೂಕನ್ನು ಇಟ್ಟುಕೊಂಡಿದ್ದರೆ ಕೂಡಲೇ ಅದನ್ನ ಸರ್ಕಾರ ಒಪ್ಪಿಸಬೇಕು. ಸರೆಂಡರ್ ಮಾಡಲು ನವೆಂಬರ್ 1ನೇ ತಾರೀಖಿನವರೆಗೂ ಅವಕಾಶ ಕೊಡ್ತೀವಿ. ಪೊಲೀಸರು, ಅಧಿಕಾರಿಗಳು ಜನರ ಮನವೊಲಿಸಬೇಕು.

ಅದರ ಜೊತೆ ಒಂದು ಕ್ಷಮೆಯಾಚನೆ ಬರೆದು ಕೊಟ್ರೆ ಸಾಕು ಎಂದು ತಿಳಿಸಿದ್ದಾರೆ. ಒಂದರ ನಂತರ ಸರೆಂಡರ್ ಮಾಡದಿದ್ದರೆ ಕ್ರಮ ಆಗುತ್ತದೆ. ರಕ್ಷಣೆಗಾಗಿ ಬಂದೂಕು ಬೇಕಿದ್ದರೆ ಅರ್ಜಿ ಹಾಕಲಿ ಎಂದರು.

ಕಸ್ತೂರಿರಂಗನ್ ವರದಿ ವಿಚಾರವಾಗಿ, ಮಂಗಳೂರು ಜಿಲ್ಲೆಗೆ ಭೇಟಿ ಕೊಟ್ಟ ಬಳಿಕ 3-4 ಜಿಲ್ಲೆಗಳಿಗೆ ಭೇಟಿಯನ್ನು ಕೊಡುತ್ತೇನೆ. ಅಲ್ಲಿ ಕಸ್ತೂರಿರಂಗನ್ ಸಂಬಂಧಪಟ್ಟ ಹಾಗೇ ರೈತರನ್ನು ಭೇಟಿ ಮಾಡುತ್ತೇನೆ.

ನಾವು ರೈತರ ಸಮಸ್ಯೆ, ಬರದ ಸಮಸ್ಯೆ ಹಾಗೂ ಕಸ್ತೂರಿ ರಂಗನ್ ಸಮಸ್ಯೆ ಕುರಿತು ವಿಶೇಷ ಅಧಿವೇಶನ ಕರೆದಿದ್ದೇವೆ ಎಂದು ತಿಳಿಸಿದ್ದಾರೆ.

## ಯುದ್ಧದ ಪರಿಣಾಮ ಮಾನವಕುಲಕ್ಕೆ ದೀರ್ಘಕಾಲದ ಸಂಕಷ್ಟ: ಪ್ರೊ. ಗುರುಲಿಂಗಮ್ಮ

ಹರಿಹರ : ಯುದ್ಧಗಳು ಕೇವಲ ತಕ್ಷಣದ ಜೀವಹಾನಿಗೆ ಕಾರಣವಾಗುವುದಲ್ಲದೆ, ಜನಸಂಖ್ಯೆಯ ಸಾಮೂಹಿಕ ಸ್ಥಳಾಂತರ, ತೀವ್ರ ಆರ್ಥಿಕ ವಿನಾಶ, ದೀರ್ಘಕಾಲೀನ ಮಾನಸಿಕ ಹಾಗೂ ದೈಹಿಕ ಆರೋಗ್ಯ ಸಮಸ್ಯೆಗಳು ಮತ್ತು ಪರಿಸರ ನಾಶದಂತಹ ಗಂಭೀರ ಪರಿಣಾಮಗಳನ್ನು ಉಂಟುಮಾಡುತ್ತವೆ ಎಂದು ಕೊಪ್ಪಳದ ಮಂಗಳೂರು ಪ್ರದೇಶದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗದ ಪ್ರೊ. ಗುರುಲಿಂಗಮ್ಮ ಬೇಸರ ವ್ಯಕ್ತಪಡಿಸಿದರು.

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಐಕ್ಯೂಎಸಿ ಹಾಗೂ ಇತಿಹಾಸ ವಿಭಾಗದ ವತಿಯಿಂದ ಆಯೋಜಿಸಿದ್ದ 'ಎರಡನೆಯ ಮಹಾಯುದ್ಧದ ಕಾರಣ ಮತ್ತು ಪರಿಣಾಮಗಳು' ವಿಷಯದ ವಿಶೇಷ ಉಪನ್ಯಾಸ-2026 ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದ ಅವರು,ಮಾನವನ ಇತಿಹಾಸದಲ್ಲಿ ಅತ್ಯಂತ ದೊಡ್ಡ ಹಾಗೂ ಮಾರಕ ಸಂಘರ್ಷ ಗಳಲ್ಲಿ ಎರಡನೆಯ ಮಹಾಯುದ್ಧ ಪ್ರಮುಖವಾದುದು.

ಜಾಗತಿಕ ಮಟ್ಟದಲ್ಲಿ ನಡೆದ ಈ ಯುದ್ಧದಲ್ಲಿ 50ಕ್ಕೂ ಹೆಚ್ಚು ರಾಷ್ಟ್ರಗಳು ನೇರವಾಗಿ ಅಥವಾ ಪರೋಕ್ಷವಾಗಿ ಭಾಗವಹಿಸಿದ್ದವು.

ಎರಡನೆಯ ಮಹಾಯುದ್ಧಕ್ಕೆ ಹಲವು ರಾಜಕೀಯ, ಆರ್ಥಿಕ ಹಾಗೂ ರಾಜತಾಂತ್ರಿಕ ಕಾರಣಗಳು ಹಿನ್ನೆಲೆಯಾಗಿದ್ದವು. ರಾಷ್ಟ್ರಗಳ ನಡುವಿನ ಅಧಿಕಾರದ ಪೈಪೋಟಿ, ವಿಸ್ತರಣಾವಾದಿ ನೀತಿಗಳು, ರಾಜತಾಂತ್ರಿಕ ಉದ್ವಿಗ್ನತೆ, ಶಸ್ತ್ರಾಸ್ತ್ರಗಳ ಸ್ಪರ್ಧೆ ಹಾಗೂ ಹಿಂದಿನ ಯುದ್ಧಗಳಿಂದ ಉಂಟಾಗಿದ್ದ ಅಸಮಾಧಾನಗಳು ಸಂಘರ್ಷದ ವಾತಾವರಣವನ್ನು ಮತ್ತಷ್ಟು ತೀವ್ರಗೊಳಿಸಿದವು.

ಇದೇ ಸಂದರ್ಭದಲ್ಲಿ ಮಹಾ ಆರ್ಥಿಕ ಕುಸಿತ



ಹಾಗೂ ಆರ್ಥಿಕ ಬಿಕ್ಕಟ್ಟುಗಳು ಅನೇಕ ರಾಷ್ಟ್ರಗಳ ಸಾಮಾಜಿಕ ಮತ್ತು ರಾಜಕೀಯ ಸ್ಥಿತಿಗತಿಗಳ ಮೇಲೂ ಪರಿಣಾಮ ಬೀರಿದ್ದವು. ಪ್ರಪಂಚದ ಬಹುತೇಕ ಭಾಗಗಳಲ್ಲಿ ಭೂಮಿ, ಸಮುದ್ರ ಹಾಗೂ ವಾಯು ಮಾರ್ಗಗಳಲ್ಲಿ ಯುದ್ಧ ನಡೆಯುವ ಮೂಲಕ ಕೋಟ್ಯಂತರ ಜನರ ಬದುಕಿನ ಮೇಲೆ ಪರಿಣಾಮ ಬೀರಿತು ಎಂದು ವಿಶ್ಲೇಷಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲೆ ಡಾ.ಎನ್. ಶಕುಂತಲಾ ಮಾತನಾಡಿ, ವ್ಯಕ್ತಿಯ ಯಶಸ್ಸು ಕೇವಲ ವೈಯಕ್ತಿಕ ಪ್ರತಿಭೆಯಿಂದ ಸಾಧ್ಯವಾಗುವುದಿಲ್ಲ ಕಟ್ಟುನಿಟ್ಟಾದ ಬದ್ಧತೆ, ಸಹಯೋಗ, ಪರಸ್ಪರ ನಂಬಿಕೆ ಹಾಗೂ ಜವಾಬ್ದಾರಿಯ ಹಂಚಿಕೆಯೂ ಯಶಸ್ಸಿನ ಪ್ರಮುಖ ಅಂಶಗಳಾಗಿವೆ ಎಂದು ಹೇಳಿದರು.

ವೈವಾಹಿಕ ಜೀವನದ ನಂತರವೂ ಕೌಟುಂಬಿಕ ಜವಾಬ್ದಾರಿಗಳನ್ನು ಸಮರ್ಥವಾಗಿ ನಿಭಾಯಿಸುತ್ತಾ, ಪತಿಯ ಪ್ರೋತ್ಸಾಹ ಮತ್ತು ಸಹಕಾರದೊಂದಿಗೆ ಪ್ರೊ. ಗುರುಲಿಂಗಮ್ಮ ಅವರು ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧನೆ ಮಾಡಿರುವುದು ಶ್ಲಾಘನೀಯ. ಅವರ ಜೀವನದ ಯಶೋಗಾಥೆಯನ್ನು ವಿದ್ಯಾರ್ಥಿಗಳು ಪ್ರೇರಣೆಯಾಗಿ ಸ್ವೀಕರಿಸಿ, ತಮ್ಮ ಗುರಿ ಸಾಧನೆಗೆ ನಿರಂತರ ಪ್ರಯತ್ನ ಮಾಡಬೇಕು ಎಂದು ಅವರು ಕರೆ ನೀಡಿದರು.

ವಿದ್ಯಾರ್ಥಿನಿ ಕು. ಶಬಾನಾಭಾನು ಪ್ರಾರ್ಥಿಸಿದರು. ಕು. ಐಶ್ವರ್ಯ ಆರ್. ಸ್ವಾಗತಿಸಿದರು. ಇತಿಹಾಸ ವಿಭಾಗದ ಮುಖ್ಯಸ್ಥ ಹನುಮಂತಪ್ಪ ಕೆ.ವೈ. ಪ್ರಾಸ್ತಾವಿಕವಾಗಿ ಮಾತನಾಡಿದರು. ಅಧ್ಯಾಪಕ ಮಲ್ಲಿಕಾರ್ಜುನ ಜವಳಿ ಕಾರ್ಯಕ್ರಮ ನಿರ್ವಹಿಸಿದರು. ಅಂತಿಮ ಬಿ.ಎ. ವಿದ್ಯಾರ್ಥಿನಿ ಕು. ಮರಿಯಮ್ಮ ಡಿ. ವಂದಿಸಿದರು.

ಕಾರ್ಯಕ್ರಮದಲ್ಲಿ ಕೊಪ್ಪಳದ ಶರಣಬಸಪ್ಪ, ಕನ್ನಡ ವಿಭಾಗದ ಮುಖ್ಯಸ್ಥೆ ಡಾ. ಗೌರಮ್ಮ ಎಂ.ಎಸ್., ಎನ್‌ಎಸ್‌ಎಸ್ ಸಂಯೋಜನಾಧಿಕಾರಿ ಯೋಗೇಶ್ ಕೆ.ಜೆ. ಸೇರಿದಂತೆ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಕಾಂಗ್ರೆಸ್ ಸರ್ಕಾರಕ್ಕೆ ಸತ್ವ ಪರೀಕ್ಷೆ!

ಶಿವಕುಮಾರ್ ಅವರು ಜೂನ್ 3 ರಂದು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು, ಕೃಷ್ಣ ಬೈರೇಗೌಡ ಅವರು ಸುಮಾರು ಎರಡು ವಾರಗಳ ನಂತರ ಬೆಂಗಳೂರು ಅಭಿವೃದ್ಧಿ ಖಾತೆಯ ಜವಾಬ್ದಾರಿಯನ್ನು ವಹಿಸಿಕೊಂಡರು.

ಗುಂಡಿಗಳು, ಹದಗೆಟ್ಟ ರಸ್ತೆಗಳು, ಸಂಚಾರ ದಟ್ಟಣೆ, ಕಲುಷಿತ ಕೆರೆಗಳು, ವಿಲೇವಾರಿಯಾಗದ ಕಸ ಮತ್ತು ಇತರ ನಾಗರಿಕ ಸಮಸ್ಯೆಗಳ ಹಿನ್ನೆಲೆಯಲ್ಲಿ, ರಾಜ್ಯ ರಾಜಧಾನಿಯಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಎದುರಿಸುವುದು ಆಡಳಿತಾರೂಢ ಕಾಂಗ್ರೆಸ್‌ಗೆ ಸವಾಲಿನ ವಿಷಯವಾಗಿದೆ. ಬೆಂಗಳೂರಿನ ಎಲ್ಲಾ ನಾಲ್ಕು ಲೋಕಸಭಾ ಕ್ಷೇತ್ರಗಳನ್ನು (ಬೆಂಗಳೂರು ಗ್ರಾಮಾಂತರ ಸೇರಿದಂತೆ) ಬಿಜೆಪಿ ಪ್ರತಿನಿಧಿಸುತ್ತಿದೆ ಮತ್ತು ನಗರದಲ್ಲಿ ಹೆಚ್ಚಿನ ಸಂ-ಖ್ಯೆಯ ಶಾಸಕರನ್ನೂ ಬಿಜೆಪಿ ಹೊಂದಿದೆ.

ಹಿರಿಯ ಕಾಂಗ್ರೆಸ್ ಸದಸ್ಯರೊಬ್ಬರು, ಬೆಂಗಳೂರಿನ ಜನರು ಹಿಂದಿನ ಬಿಬಿಎಂಪಿ ಆಡಳಿತವನ್ನು ಮರೆತಿದ್ದಾರೆ ಎಂದು ಹೇಳಿದರು. ಅನೇಕ ನಾಗರಿಕ ಸಮಸ್ಯೆಗಳ ನಡುವೆ, ಸ್ಥಳೀಯ ಕೌನ್ಸಿಲರ್ ಇಲ್ಲದಿರುವುದು ಜನರಲ್ಲಿ ಹತಾಶೆ ಮೂಡಿಸಿದೆ. ನಮ್ಮ ಸರ್ಕಾರವು ಐದು ನಿಗಮಗಳನ್ನು ರಚಿಸಿದೆ.

ಅವುಗಳಲ್ಲಿ ಕನಿಷ್ಠ ಮೂರನ್ನಾದರೂ ಗೆಲ್ಲಬೇಕೆಂಬ ಒತ್ತಡ ನಮ್ಮ ಮೇಲಿದೆ, ಇದು ಸವಾಲಿನ ವಿಷಯವಾಗಿದೆ.

ಇಷ್ಟು ವರ್ಷಗಳ ಕಾಲ ಬೆಂಗಳೂರು ಒಂದೇ ನಿಗಮವನ್ನು ಹೊಂದಿತ್ತು. ಸಾಮಾನ್ಯವಾಗಿ ಒಂದೇ ಪಕ್ಷವು ಅಧಿಕಾರಕ್ಕೆ ಬರುತ್ತಿತ್ತು. ಆದರೆ ಈಗ ಪರಿಸ್ಥಿತಿ ಹಾಗಿಲ್ಲ. ನಿಗಮದ ಚುನಾವಣೆಯಲ್ಲಿ ಸೋಲುವುದು ರಾಜ್ಯ ಸರ್ಕಾರಕ್ಕೆ ಮುಜುಗರದ ವಿಷಯವಾಗಲಿದೆ ಎಂದು ಅವರು ಹೇಳಿದರು.

## 24.97 ಲಕ್ಷ ಮತದಾರರಿಗೆ ಬಿಗ್ ಶಾಕ್

ಮಹಿಳೆಯರು ಮತ್ತು 2,874 ತೃತೀಯ ಲಿಂಗಿ ಮತದಾರರು ಸೇರಿದ್ದಾರೆ ಎಂದು ಅದು ತಿಳಿಸಿದೆ. ಪ್ರಕ್ರಿಯೆಯ ಭಾಗವಾಗಿ, 'ಮ್ಯಾಪಿಂಗ್ ಇಲ್ಲದಿರುವಿಕೆ' ಮತ್ತು 'ವ್ಯತ್ಯಾಸಗಳು' ಎಂಬ ವರ್ಗಗಳ ಅಡಿಯಲ್ಲಿ ಬರುವ ಮತದಾರರಿಗೆ ನೋಟಿಸ್‌ಗಳನ್ನು ನೀಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮುಖ್ಯ ಚುನಾವಣಾ ಅಧಿಕಾರಿ ಕಚೇರಿ ನೀಡಿರುವ ಹೇಳಿಕೆ ಪ್ರಕಾರ, ಸೆಪ್ಟೆಂಬರ್ 10ರ ವೇಳೆಗೆ ರಾಜ್ಯದಾದ್ಯಂತ ಒಟ್ಟು 43,81,760 ನೋಟಿಸ್‌ಗಳನ್ನು ಸಿದ್ಧಪಡಿಸಲಾಗಿದೆ. ಇವುಗಳಲ್ಲಿ 24,97,075 (ಶೇ 56.99) ನೋಟಿಸ್‌ಗಳನ್ನು ಯಶಸ್ವಿಯಾಗಿ ನೀಡಲಾಗಿದ್ದು, 18,84,685 ನೋಟಿಸ್‌ಗಳನ್ನು ಇನ್ನೂ ಬಾಕಿ ಇವೆ.

'ನೋಟಿಸ್ ಪಡೆದವರ ಪೈಕಿ ಇದೀಗ, 7,03,710 (ಶೇ 28.18) ಮಂದಿಯ ವಿಚಾರಣೆ ಪೂರ್ಣಗೊಂಡಿದೆ. ಇನ್ನೂ 17,93,365 ವಿಚಾರಣೆಗಳು ಬಾಕಿ ಇವೆ. ಬಾಕಿ ಇರುವ ವಿಚಾರಣೆಗಳನ್ನು ಸೆಪ್ಟೆಂಬರ್ 12ರೊಳಗೆ ನಡೆಸಿ, ಸೆಪ್ಟೆಂಬರ್ 22ರೊಳಗೆ ಎಲ್ಲ ಹಕ್ಕು-ಆಕ್ಷೇಪಣೆಗಳ ವಿಲೇವಾರಿ ಪೂರ್ಣಗೊಳಿಸಲಾಗುತ್ತದೆ' ಎಂದು ಅದು ತಿಳಿಸಿದೆ. ನೋಂದಾಯಿತ ಮತ್ತು ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಕೋರಿಕೆ ಮೇರೆಗೆ, 'ಮ್ಯಾಪಿಂಗ್ ಇಲ್ಲದಿರುವಿಕೆ' ಮತ್ತು 'ವ್ಯತ್ಯಾಸಗಳು' ಎಂಬ ವರ್ಗಗಳ ಅಡಿಯಲ್ಲಿ ನೋಟಿಸ್‌ಗಳನ್ನು ಪಡೆದ ವ್ಯಕ್ತಿಗಳ ಪಟ್ಟಿಗಳನ್ನು ಸೆಪ್ಟೆಂಬರ್ 5 ರಂದು ಸಿಇಒ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

## ಹಾಸನ ಸಂಸದ ಶ್ರೇಯಸ್ ಪಟೇಲ್,-ಶಾಸಕ ಎ.ಮಂಜು ನಡುವೆ ತಿಕ್ಕಾಟ

ಹಾಸನ : ಸಂಸದ ಶ್ರೇಯಸ್ ಪಟೇಲ್ ಮತ್ತು ಶಾಸಕ ಎ. ಮಂಜು ನಡುವಿನ ರಾಜಕೀಯ ತಿಕ್ಕಾಟದ ಪರಿಣಾಮ ಹಾಸನದ ಅಧಿಕಾರಿಗಳು ಸಂಕಷ್ಟಕ್ಕೆ ಸಿಲುಕಿದ್ದಾರೆ. ಹೊಳೆನರಸೀಪುರ ತಾಲೂಕಿನ ಹಳ್ಳಿ ಮೈಸೂರು ಗ್ರಾಮ ಪಂಚಾಯತ್ ಮಟ್ಟದ ಸಭೆ ಸಂಬಂಧ ಹಾಸನ ಜಿಲ್ಲಾದಿಕಾರಿ, ಅಪರ ಜಿಲ್ಲಾದಿಕಾರಿ, ಜಿಲ್ಲಾ ಪಂಚಾಯತ್ ಸಿಇಓ, ಹೊಳೆನರಸೀಪುರ ತಾಲೂಕು ಪಂಚಾಯತ್ ಇಓ ಮತ್ತು ತಹಶೀಲ್ದಾರ್ ವಿರುದ್ಧ ಜೆಡಿಎಸ್ ಶಾಸಕ ಎ. ಮಂಜು ವಿಧಾನಸಭೆ ಅಧ್ಯಕ್ಷರಿಗೆ ಹಕ್ಕುಚ್ಯುತಿ ಸಂಬಂಧ ದೂರು ನೀಡಿದ್ದಾರೆ.

ಸೆಪ್ಟೆಂಬರ್ 1ರಂದು ಹಳ್ಳಿ ಮೈಸೂರು ಗ್ರಾಮ ಪಂಚಾಯತ್‌ನಲ್ಲಿ ಸಂಸದ ಶ್ರೇಯಸ್ ಪಟೇಲ್ ಪ್ರಗತಿ ಪರಿಶೀಲನೆ ಸಭೆ ಕರೆದಿದ್ದರು. ಈ ಬಗ್ಗೆ ಡಿಸಿ, ಸಿಇಓಗೆ ಆಗಸ್ಟ್ 28ರಂದು ಪತ್ರ ಬರೆದು, ಹೊಳೆನರಸೀಪುರ ತಹಶೀಲ್ದಾರ್ ಮತ್ತು ಕಂದಾಯ ಇಲಾಖೆ ಅಧಿಕಾರಿಗಳ ಖುದ್ದು ಹಾಜರಿಗೆ ಮನವಿ ಮಾಡಿದ್ದರು. ಸಂಸದರ ಪತ್ರ ಆಧರಿಸಿ ಡಿಸಿ ಕಚೇರಿಯಿಂದ ತಹಶೀಲ್ದಾರ್‌ಗೆ, ಸಿಇಓ ಕಚೇರಿಯಿಂದ ತಾಲೂಕು ಪಂಚಾಯತ್ ಇಓಗೆ ಪತ್ರ ರವಾನಿಸಲಾಗಿತ್ತು. ಆದರೆ ಈ ಸಭೆ ಬಗ್ಗೆ ಶಾಸಕ ಎ. ಮಂಜು ಆಕ್ಷೇಪ ವ್ಯಕ್ತಪಡಸಿದ್ದರು. ಕೂಡಲೇ ಎಚ್ಚೆತ್ತ ಡಿಸಿ ಪ್ರಗತಿ ಪರಿಶೀಲನೆ ಸಭೆ ಹೆಸರಿನಲ್ಲಿ ಬರೆಯಲಾಗಿದ್ದ ಪತ್ರ ವಾಪಸ್ ಪಡೆದಿದ್ದರು. ಇಷ್ಟೆಲ್ಲ ನಡೆದ ಬಳಿಕ ಮತ್ತೆ ಹೊಸದಾಗಿ ಅಗಸ್ಟ್ 31ರಂದು ಗ್ರಾಮ ಪಂಚಾಯತ್‌ನಲ್ಲಿ ಅಹವಾಲು ಸ್ವೀಕಾರ ಸಭೆ ಎಂದು ಭೇಟಿಯ ಉದ್ದೇಶ ಬದಲಾವಣೆ ಮಾಡಿ ಸಂಸದರು ಪತ್ರ ಬರೆದಿದ್ದರು. ಹೀಗಾಗಿ ಈ ಸಂಬಂಧ ಸೂಕ್ತ ಕ್ರಮವಹಿಸಲು ಜಿಲ್ಲಾಧಿಕಾರಿಗಳು ಸೂಚಿಸಿದ್ದರು. ಆದರೆ ನಿಯಮ ಉಲ್ಲಂಘನೆ ಮಾಡಿ ಅರಕಲಗೂಡು ವಿಧಾನಸಭಾ ವ್ಯಾಪ್ತಿಯ ಹಳ್ಳಿಮೈಸೂರಲ್ಲಿ ಸಭೆ ನಡೆಸಲಾಗಿದೆ. ಇದ-ರಿಂದ ಶಾಸಕನ ಹಕ್ಕಿಗೆ ಚ್ಯುತಿಯಾಗಿದೆ. ಹೀಗಾಗಿ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ ಎಂದು ಆಗ್ರಹಿಸಿ ಎ. ಮಂಜು ಪತ್ರ ಬರೆದಿದ್ದಾರೆ.

ಇನ್ನು ಈ ವಿಚಾರವಾಗಿ ಪ್ರತಿಕ್ರಿಯಿಸಿರುವ ಸಂಸದ ಶ್ರೇಯಸ್ ಪಟೇಲ್, ಹಳ್ಳಿಮೈಸೂರು ನನ್ನ ಸ್ವ-ಂತ ಹೋಬಳಿ ಮತ್ತು ಕರ್ಮಭೂಮಿ. ಹಾಗಾಗಿ ಅಲ್ಲಿ ಗ್ರಾಮ ಪಂಚಾಯತ್‌ಗೆ ಭೇಟಿ ಕೊಟ್ಟಿದ್ದೆ. ಅದು ಹಿಂದುಳಿದ ಹೋಬಳಿಯಾಗಿರುವ ಕಾರಣ ತಹಶೀಲ್ದಾರ್ ಮತ್ತು ಇಓ ಕರೆಸಿ ಮಾಹಿತಿ ಪಡೆಯಲು ಹೋಗಿದ್ದೆ. ಈ ವೇಳೆ ಅಲ್ಲಿ ಸಾವಿರಾರು ಜನ ಸೇರಿದ್ದರು. ಅವರು ಪತ್ರ ಹಿಡಿದು ಬಂದಾಗ ನಾನು ಅಹವಾಲು ಕೇಳಬೇಕಲ್ಲವೇ? ಅದರಲ್ಲಿ ಹಕ್ಕುಚ್ಯುತಿ ಎಲ್ಲಿ ಬಂತು ಎಂದವರು ಪ್ರಶ್ನಿಸಿದ್ದಾರೆ.





## ಶಾಲಾ ಕಟ್ಟಡದ ದುರಸ್ಥಿಯನ್ನ ಸರಿಪಡಿಸಬೇಕೆಂದು ಹಸಿರು ಸೇನೆ ಒತ್ತಾಯ



ಕೂಡ್ಲಿಗಿ:ಪಟ್ಟಣದ ಹೃದಯ ಭಾಗದಲ್ಲಿರುವ ಮೇನ್ ಬಾಯ್ಸ್ ಸ್ಕೂಲ್ ಶಾಲೆಯ ಕಟ್ಟಡದ ಗೋಡೆಗಳ ಮೇಲೆ ಮಳೆನೀರು ನಿಂತು ಗೋಡೆಗಳ ಬಿರುಕುಗೊಂಡು ಗಿಡಗಳು ಬೆಳೆದುಕೊಂಡಿದ್ದಾವೆ.ಶಾಲೆಯ ಕಟ್ಟಡವನ್ನ ದುರಸ್ಥಿಯನ್ನ ಸರಿಪಡಿಸಿ ಹಾಗೂ ಸ್ವಚ್ಛತೆಯನ್ನ ಕಾಪಾಡಿಕೊಳ್ಳಬೇಕು ಎಂದು ರೈತ ಸಂಘದ ಹುಚ್ಚವ್ವನಹಳ್ಳಿ ಮಂಜುನಾಥ್ ಬಣದ ತಾಲೂಕು ಅಧ್ಯಕ್ಷ ಬಾಣದ ಮಾರುತಿ ಅವರ ನೇತೃತ್ವದಲ್ಲಿ ಶಾಲೆಯ ಮುಖ್ಯಗುರುಗಳು ಭೀಮಪ್ಪ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಮಳೆಗಾಲದಲ್ಲಿ ಶಾಲೆಯ ಕಟ್ಟಡದ ಗೋಡೆಗಳ ಮೇಲೆ ಗಿಡಗಳ ಬೆಳದು ಬೇರುಗಳು ಆಳವಾಗಿ ಬೆಳೆಯುತ್ತಿರುವುದರಿಂದ ಕಟ್ಟಡವು ಕುಸಿದು ಬೀಳುವ ಬಹುದು, ಕಟ್ಟಡದ ಗೋಡೆಗಳ ಬಿರುಕುಗಳಿಂದ ನೀರು ಸೋರಿ ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರಿಗೆ ತೊಂದರೆಯಾಗುತ್ತದೆ. ವಿಷಜಂತುಗಳು ಹಾವು, ಚೇಳುಗಳು ಆಶ್ರಯ ಪಡೆಯ ಬಹುದು, ಮಕ್ಕಳ ಸುರಕ್ಷತೆಗೆ ಶಾಲೆಯ ಕಟ್ಟಡ ಗೋಡೆಗಳನ್ನ ಹಾಗೂ ಮೇಲ್ಚಾವಣಿಯನ್ನ ದುರಸ್ಥಿಯನ್ನ ಸರಿಪಡಿಸಬೇಕು,

ಶಾಲೆಯ ಕಾಂಪೌಂಡ್ ಇದ್ದರೂ ಅಕ್ರಮ ಚಟುವಟಿಕೆಗಳನ್ನ ನಡೆಯುತ್ತವೆ ಇದ-ಕ್ಕೆ ಸಂಬಂಧಿಸಿದ ಅಧಿಕಾರಿಗಳು ಕಡಿವಾಣ ಹಾಕಬೇಕು,ಅಕ್ರಮ ಚಟುವಟಿಕೆಗಳು ಒಂದು ವೇಳೆ ಕಡಿವಾಣ ಹಾಕದಿದ್ದಲ್ಲಿ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಮಾಡಬೇಕಾಗುತ್ತೆದೆ ಎಚ್ಚರಿಕೆ ಘಂಟೆ ನೀಡಿದರು.ಈ ಸಂಧರ್ಭದಲ್ಲಿ ತಾಲೂಕು ಅಧ್ಯಕ್ಷ ಬಾಣದ ಮಾರುತಿ ಉಪಾಧ್ಯಕ್ಷ ಎಂ.ಡಿ ಫಯಾಜ್, ಕಾರ್ಯದರ್ಶಿ ಜಿ.ವಿಜಯ್ ಕುಮಾರ್, ವಕೀಲ ಬಸವರಾಜ್, ಸೂಲ್ದರಹಳ್ಳಿ ಸಂದೀಪ್,ಇನ್ನು ಸೇರಿದಂತೆ ಉಪಸ್ಥಿತಿತರಿದ್ದರು.

## ಅಂಚೆ ಜೀವ ವಿಮೆ ಪಾಲಿಸಿಯನ್ನ ಗ್ರಾಹಕರು ಸದುಪಯೋಗವನ್ನು ಪಡೆದುಕೊಳ್ಳಬೇಕು : ಕೆ. ವೆಂಕಟೇಶ್



ಕೂಡ್ಲಿಗಿ:ದೇಶದಲ್ಲಿ ಹೊಸದಾಗಿ ಜಾರಿಯಾಗಿರುವ ನಗರ ಪ್ರದೇಶದ ಅಂಚೆ ಜೀವ ವಿಮೆ ಪಾಲಿಸಿಯ ಮೊದಲ ಬಾಂಡನ್ನು ಪಟ್ಟಣದ ಪ್ರಧಾನ ಅಂಚೆ ಕಚೇರಿಯಲ್ಲಿ ಬುಧವಾರ ವಿತರಣೆ ಮಾಡಲಾಯಿತು.

ಈ ಸಂದರ್ಭದ ಬಾಂಡ್ ವಿತರಣೆ ಮಾಡಿ ಮಾತನಾಡಿದ ಹೂವಿನ ಹಡಗಲಿಯ ಪೋಸ್ಟ್ ಮಾಸ್ಟರ್ ಅಂಚೆ ಕೊಟ್ರೇಶ್, ಈ ಮೊದಲು ಈ ವಿಮೆ ಕೇಲವ ಗ್ರಾಮೀಣ ಪ್ರದೇಶದವರಿಗೆ ಮಾತ್ರ ಸಿಗುತ್ತಿತ್ತು. ಇದನ್ನು ಗಮನಿಸಿದ ನಾನು 2026ರ ಜೂನ್ ತಿಂಗಳಲ್ಲಿ ಕೇಂದ್ರದ ಸಂಪರ್ಕ ಖಾತೆ ಸಚಿವರಿಗೆ ಮೇಲ್ ಮೂಲಕ ಪತ್ರ ಬರೆದಿದ್ದೆ. ಇದನ್ನು ಗಮನಿಸಿದ ಸಚಿವರು, ಆಗಸ್ಟ್ 14ರಂದು ಆದೇಶ ಜಾರಿ ಮಾಡಿದರು. ಇದರಿಂದ ಅಂಚೆ ಕಚೇರಿಯಲ್ಲಿ ಉಳಿತಾಯ ಖಾತೆ ಹೊಂದಿರುವ ನಗರ ವಾಸಿಗಳು ಸಹ ಅಂಚೆ ಜೀವ ವಿಮಾ ಸೌಲಭ್ಯಕ್ಕೆ ಅರ್ಹರಾಗಿದ್ದು, ಅನಕ್ಷಸ್ಥರಾಗಿದ್ದರೂ, 18ರಿಂದ 55 ವಯಸ್ಸಿನ ಎಲ್ಲಾ ಆರೋಗ್ಯವಂತ ನಾಗರೀಕರು ವಿಮೆ ಪಡೆಯಬಹುದಾಗಿದೆ. ಇದರಲ್ಲಿ ವಾರ್ಷಿಕ ಶೇ 45ರಷ್ಟು ಬೋನಸ್ ಸಿಗಲಿದೆ ಎಂದು ಮಾಹಿತಿ ನೀಡಿದರು.

ಕೂಡ್ಲಿಗಿ ಉಪ ವಿಭಾಗದ ಅಭಿವೃದ್ಧಿ ಅಧಿಕಾರಿ ಕೆ. ವೆಂಕಟೇಶ್ ಮಾತನಾಡಿ, ಅಂಚೆ ಜೀವ ವಿಮೆ, ನಾಗರಿಕನ ದುಡಿದ ಹಣಕ್ಕೆ ತಕ್ಕ ಪ್ರತಿಫಲವನ್ನು ತಂದುಕೊಡುತ್ತದೆ. ಇದರಲ್ಲಿ ಯಾವುದೇ ಏಜೆ-ಂಟ್ ಕಮಿಷನ್ ಗ್ರಾಹಕರಿಂದ ತೆಗೆದುಕೊಳ್ಳುವುದಿಲ್ಲ. ಇದರ ಸದುಪಯೋಗವನ್ನು ಗ್ರಾಹಕರು ಪಡೆದುಕೊಳ್ಳಬೇಕು ಎಂದು ಹೇಳಿದರು.

ಇದರ ಮೊದಲ ಫಲಾನುಭವಿಯಾಗಿ ಪಟ್ಟಣದ ಶಂಕ್ರಮ್ಮ ಅವರು ಅಂಚೆ ಜೀವ ವಿಮೆ ಬಾಂಡ್ ಪಡೆದರು.

## ಸತೀಶ್ ಜಾರಕಿಹೊಳಿ ಮೇಲೆ ಇಡಿ ದಾಳಿಗೆ ಖಂಡನೆ

1ನೇ ಪುಟದಿಂದ..

ತನಿಖೆ ನಡೆಸುವುದಕ್ಕೆ ಕಾಂಗ್ರೆಸ್ ವಿರೋಧ ವ್ಯಕ್ತಪಡಿಸುವುದಿಲ್ಲ. ಆದರೆ ತನಿಖಾ ಸಂಸ್ಥೆಗಳ ಕ್ರಮಗಳು ಕಾನೂನುಬದ್ಧವಾಗಿದ್ದು, ರಾಜಕೀಯ ಉದ್ದೇಶದಿಂದ ಕೂಡಿರಬಾರದು ಎಂಬುದು ನಮ್ಮ ನಿಲುವಾಗಿದೆ ಎಂದು ಪ್ರತಿಭಟನಾಕಾರರು ಹೇಳಿದರು.

ಜನಪ್ರತಿನಿಧಿಗಳು ಹಾಗೂ ವಿರೋಧ ಪಕ್ಷದ ಮುಖಂಡರನ್ನು ಗುರಿಯಾಗಿಸಿಕೊಂಡು ತನಿಖಾ ಸಂಸ್ಥೆಗಳನ್ನು ಬಳಸಿಕೊಳ್ಳುತ್ತಿರುವುದು ಪ್ರಜಾಪ್ರಭುತ್ವದ ವ್ಯವಸ್ಥೆಗೆ ಧ-ಕ್ಕೆ ತರುವ ಬೆಳವಣಿಗೆಯಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಪಂಜಿನ ಮೆರವಣಿಗೆಯುದ್ದಕ್ಕೂ ಕಾರ್ಯಕರ್ತರು ಕೇಂದ್ರ ಸರ್ಕಾರ ಮತ್ತು ಇಡಿ ವಿರುದ್ಧ ಘೋಷಣೆಗಳನ್ನು ಕೂಗಿ ತಮ್ಮ ಅಸಮಾಧಾನ ವ್ಯಕ್ತಪಡಿಸಿದರು. ಪ್ರತಿಭಟನೆಯ ಹಿನ್ನೆಲೆಯಲ್ಲಿ ಕುರುಗೋಡು ಪಟ್ಟಣದ ಪ್ರಮುಖ ಸ್ಥಳಗಳಲ್ಲಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು. ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸರು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದ್ದರು. ಪ್ರತಿಭಟನೆಯ ಸಂದರ್ಭದಲ್ಲಿ ಕಾಂಗ್ರೆಸ್ ಕಾರ್ಯಕರ್ತರಲ್ಲಿ ಉತ್ಸಾಹ ಮತ್ತು ಆಕ್ರೋಶದ ವಾತಾವರಣ ಕಂಡುಬಂತು.

ಶಾಸಕ ಜೆ.ಎನ್. ಗಣೇಶ್ ಅವರ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಕಾಂಗ್ರೆಸ್ ಮುಖಂಡರು, ಸ್ಥಳೀಯ ಜನಪ್ರತಿನಿಧಿಗಳು, ಯುವ ಕಾಂಗ್ರೆಸ್ ಕಾರ್ಯಕರ್ತರು, ವಿವಿಧ ಘಟಕಗಳ ಪದಾಧಿಕಾರಿಗಳು ಹಾಗೂ ಪಕ್ಷದ ಕಾರ್ಯಕರ್ತರು ಪಾಲ್ಗೊಂಡಿದ್ದರು.

ಸಚಿವ ಸತೀಶ್ ಜಾರಕಿಹೊಳಿ ಅವರ ಮೇಲಿನ ಇಡಿ ಕ್ರಮದ ವಿರುದ್ಧ ಮುಂದಿನ ದಿನಗಳಲ್ಲಿಯೂ ಪಕ್ಷದ ವತಿಯಿಂದ ಹೋರಾಟ ಮುಂದುವರಿಸುವ ಕುರಿತು ಕಾರ್ಯಕರ್ತರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

## ಒಂದು ದಿನದ ಕಾರ್ಯಾಗಾರ ಸಮಾರಂಭ

ದಾವಣಗೆರೆ : ಸೆಪ್ಟೆಂಬರ್ 21 ರಂದು ಬೆಳಿಗ್ಗೆ 10.30ಕ್ಕೆ ನಗರದ ಜಿಲ್ಲಾ ಸರ್ಕಾರಿ ನಿವೃತ್ತ ನೌಕರರ ಭವನ, ಎಂ.ಸಿ.ಸಿ ಬಿ ಬ್ಲಾಕ್ ದವನ್ ಕಾಲೇಜ್ ಹತ್ತಿರ ಇಲ್ಲಿ ಪೋಷಕರಿಗೆ ಮತ್ತು ಹಿರಿಯ ನಾಗರಿಕರ ಪಾಲನೆ ಪೋಷಣೆ ಕುರಿತು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಮತ್ತು ಕಾರ್ಯಕರ್ತರಿಗಾಗಿ ಒಂದು ದಿನದ ಕಾರ್ಯಾಗಾರ ಉದ್ಘಾಟನಾ ಸಮಾರಂಭವನ್ನು ಆಯೋಜಿಸಲಾಗಿದೆ. ಕಾರ್ಯಕ್ರಮವನ್ನು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯ, ಕರ್ನಾಟಕ ಸರ್ಕಾರ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ಹಾಗೂ ಹಿರಿಯನಾಗರಿಕರ ಶ್ರೇಯೋಭಿವೃದ್ದಿಗಾಗಿ ಶ್ರಮಿಸುತ್ತಿರುವ ಸ್ವಯಂ ಸೇವಾ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಲಾದ ಕಾರ್ಯಕ್ರಮವನ್ನು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ರಂಗೇಗೌಡ.ಸಿ ಉದ್ಘಾಟಿಸುವರು. ಅಪರ ಜಿಲ್ಲಾಧಿಕಾರಿ ಶೀಲವಂತ ಶಿವಕುಮಾರ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದ ಟಿ.ಆರ್. ಗುರುಬಸವರಾಜ, ದಾ.ಜಿ.ಹಿ.ನಾ ಸಂಘದ ಪದಾಧಿಕಾರಿಗಳು ಇರಲಿದ್ದಾರೆ.

## ಹಸಿದವರಿಗೆ ಅನ್ನ ನೀಡುವುದು ಶ್ರೇಷ್ಠ ದಾನ: ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮೀಜಿ





ಕೊಟ್ಟೂರು: ತಾಲೂಕಿನ ಅಂಬಳಿ ಗ್ರಾಮದಲ್ಲಿ ಶ್ರೀ ಕಲ್ಲೇಶ್ವರ ದೇವರ ಹೆಸರಿನಲ್ಲಿ ಬೆನಕನ ಅಮಾವಾಸ್ಯೆ ಪ್ರಯುಕ್ತ ಭಕ್ತರಿಗೆ ಪ್ರಸಾದ ವಿತರಿಸುವ ಕಾರ್ಯಕ್ರಮ ನಡೆಯಿತು. ಗ್ರಾಮದ ಭಜನಾ ಸಂಘ, ನೌಕರರ ಸಂಘ, ಊರಿನ ಮುಖಂಡರು ಹಾಗೂ ಆಯಾಗಾರರು ಸೇರಿದಂತೆ ಗ್ರಾಮಸ್ಥರು ಜಾತಿ, ಧರ್ಮದ ಭೇದವಿಲ್ಲದೆ ಒಗ್ಗೂಡಿ ಕಾರ್ಯಕ್ರಮವನ್ನು ಆಯೋಜಿಸಿದ್ದರು. ಗ್ರಾಮದ ಹಾಗೂ ಸುತ್ತಮುತ್ತಲಿನ ಹಳ್ಳಿಗಳಿಂದ ಆಗಮಿಸಿದ್ದ ಭಕ್ತರು ಒಂದೇ ಸ್ಥಳದಲ್ಲಿ ಕುಳಿತು ಪ್ರಸಾದ ಸ್ವೀಕರಿಸಿದರು.

ಕಾರ್ಯಕ್ರಮದಲ್ಲಿ ಡೋಣೂರು ಚಾನುಕೋಟಿ ಮಠದ ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮೀಜಿ ಆಶೀರ್ವಚನ ನೀಡಿ, ಶ್ರಾವಣ ಮಾಸ ಅತ್ಯಂತ ಪವಿತ್ರವಾದ ಕಾಲವಾಗಿದ್ದು, ಈ ಅವಧಿಯಲ್ಲಿ ದೇವರ ಹೆಸರಿನಲ್ಲಿ ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಕ್ರಮಗಳನ್ನು ಆಯೋಜಿಸುವುದು ಶ್ರೇಷ್ಠ ಕಾರ್ಯವಾಗಿದೆ. ಹಸಿದವರಿಗೆ ಅನ್ನ ನೀಡುವುದು ಎಲ್ಲ ದಾನಗಳಿಗಿಂತಲೂ ಶ್ರೇಷ್ಠವಾದುದು. ಅಂಬಳಿ ಗ್ರಾಮಸ್ಥರು ಪ್ರತಿವರ್ಷವೂ ಪ್ರಸಾದ ವಿತರಿಸುವ ಸಂಪ್ರದಾಯವನ್ನು ಮುಂದುವರಿಸಿಕೊಂಡು ಬರುತ್ತಿರುವುದು ಶ್ಲಾಘನೀಯ ಎಂದು ಹೇಳಿದರು.

ದೇವರ ಪ್ರಸಾದ ಎನ್ನುವುದು ಭಾರತೀಯ ಸಂಸ್ಕೃತಿ ಹಾಗೂ ಹಿಂದೂ ಧರ್ಮದಲ್ಲಿ ಪವಿತ್ರವಾದ ಪರಿಕಲ್ಪನೆಯಾಗಿದ್ದು, ಜಾತಿ-ಧರ್ಮದ ಭೇದವಿಲ್ಲದೆ ಎಲ್ಲರೂ ಒಂದಾಗಿ ಪ್ರಸಾದ ಸ್ವೀಕರಿಸುವ ಮೂಲಕ ಸಾಮಾಜಿಕ ಸಾಮರಸ್ಯವನ್ನು ಬೆಳೆಸಬೇಕು. ಮುಂದಿನ ದಿನಗಳಲ್ಲಿಯೂ ಗ್ರಾಮದ ಯಾವುದೇ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಕ್ತರಿಗೆ ಪ್ರಸಾದದ ಜೊತೆಗೆ ಸ್ವಾಮೀಜಿಗಳಿಂದ ಆಶೀರ್ವಚನ ಕೊಡಿಸುವ ಪರಿಪಾಠ ಬೆಳೆಸಿಕೊಳ್ಳಬೇಕು. ಇದರಿಂದ ಭಕ್ತರಲ್ಲಿ ಆಧ್ಯಾತ್ಮಿಕ ಚಿಂತನೆ ಹಾಗೂ ಭಕ್ತಿ ಮತ್ತಷ್ಟು ವೃದ್ಧಿಯಾಗಲಿದೆ ಎಂದು ಸಲಹೆ ನೀಡಿದರು.

ದೇವರಲ್ಲಿ ಪ್ರಾರ್ಥಿಸುವಾಗ ಮತ್ತೊಬ್ಬರ ಮುಂದೆ ಕೈಚಾಚಿ ಬೇಡುವ ಪರಿಸ್ಥಿತಿ ಬಾರದಂತಹ ಜೀವನವನ್ನು ನೀಡುವಂತೆ, ಜೀವಿತಾವಧಿಯವರೆಗೆ ದುಡಿಯುವ ಶಕ್ತಿ ಮತ್ತು ಸಾಮರ್ಥ್ಯವನ್ನು ಕರುಣಿಸುವಂತೆ ಬೇಡಿಕೊಳ್ಳಬೇಕು. ಹಾಗೆಯೇ ಮತ್ತೊಬ್ಬರಿಗೆ ದಾನ ಮಾಡುವ ಹಾಗೂ ನೆರವಾಗುವ ಶಕ್ತಿಯನ್ನು ದೇವರು ನೀಡಲಿ ಎಂದು ಪ್ರಾರ್ಥಿಸಬೇಕು. ಜೀವನದ ಅಂತ್ಯವೂ ಯಾರಿಗೂ ತೊಂದರೆ ಅಥವಾ ಹೊರೆಯಾಗದಂತೆ ನಿರಾಯಾಸವಾಗಿ ಆಗಲಿ ಎಂಬುದು ಪ್ರತಿಯೊಬ್ಬರ ಪ್ರಾರ್ಥನೆಯಾಗಿರಬೇಕು ಎಂದು ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮೀಜಿ ಆಶೀರ್ವಚನದಲ್ಲಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಎ. ಷಡಕ್ಷರಿ, ಎಂ. ದೇವೇಂದ್ರಗೌಡ, ಟಿ. ಹರೀಶ್ವರಗೌಡ, ಟಿ.ಜಿ. ಕೊಟ್ರಗೌಡ, ಎಂ. ಚನ್ನಬಸಪ್ಪ, ಕೆ. ರಾಜಶೇಖರಗೌಡ, ಎನ್. ಕಲ್ಲಪ್ಪ, ಎಚ್. ಮಲ್ಲನಗೌಡ, ಎನ್. ಬಸವರಾಜ, ಎಸ್. ಕವಳೆಪ್ಪ, ನಿವೃತ್ತ ಸರ್ಕಾರಿ ನೌಕರರಾದ ಈಶಯ್ಯ, ಬಿ. ಚಂದ್ರಗೌಡ, ಪ್ರಭುದೇವಯ್ಯ, ಕೆ. ರವೀಂದ್ರ, ಚಲವಾದಿ ನಾಗರಾಜ್ ಸೇರಿದಂತೆ ಹಲವರನ್ನು ಸನ್ಮಾನಿಸಲಾಯಿತು. ಊರಿನ ಮುಖಂಡರು, ಯುವಕರು, ಶ್ರೀ ಕಲ್ಲೇಶ್ವರನ ಭಕ್ತರು ಹಾಗೂ ಆಯಾಗಾರರು ಉಪಸ್ಥಿತರಿದ್ದರು.

## ಸತೀಶ್ ಜಾರಕಿಹೊಳಿ ಮೇಲೆ ಇಡಿ ದಾಳಿಗೆ ಖಂಡನೆ ಕಾಂಗ್ರೆಸ್ ಕಾರ್ಯಕರ್ತರಿಂದ ಬೃಹತ್ ಪಂಜಿನ ಮೆರವಣಿಗೆ



ಬಳ್ಳಾರಿ: ಸಚಿವ ಸತೀಶ್ ಜಾರಕಿಹೊಳಿ ಅವರ ಮೇಲೆ ಜಾರಿ ನಿರ್ದೇಶನಾಲಯ (ಇಆ) ದಾಳಿ ನಡೆಸಿರುವುದನ್ನ ಖಂಡಿಸಿ ಕಾಂಗ್ರೆಸ್ ಕಾರ್ಯಕರ್ತರು ಬಳ್ಳಾರಿಯ ಕುರುಗೋಡು ಪಟ್ಟಣದಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು.

ಕಂಪ್ಲಿ ಶಾಸಕ ಜೆ.ಎನ್ ಗಣೇಶ್ ಅವರ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪಂಜಿನ ಮೆರವಣಿಗೆ ನಡೆಸಿ ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಕುರುಗೋಡು ಪಟ್ಟಣದ ದೊಡ್ಡ ಬಸವೇಶ್ವರ ದೇವಸ್ಥಾನದಿಂದ ಮೇನ್ ಸರ್ಕಲ್‌ವರೆಗೆ ಪಂಜಿನ ಮೆರವಣಿಗೆ ನಡೆಯಿತು. ಅಪಾರ ಸಂಖ್ಯೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಭಾಗವಹಿಸಿ ಕೇಂದ್ರ ಸರ್ಕಾರ ಹಾಗೂ ಇಡಿ ಸಂಸ್ಥೆಯ ವಿರುದ್ಧ ಘೋಷಣೆಗಳನ್ನ ಕೂಗಿ ಪ್ರತಿಭಟನೆ ನಡೆಸಿದರು.

ರಾಜಕೀಯ ಉದ್ದೇಶಕ್ಕಾಗಿ ತನಿಖಾ ಸಂಸ್ಥೆಗಳನ್ನ ದುರುಪಯೋಗ ಪಡಿಸಿಕೊಳ್ಳುವುದನ್ನು ಕೇಂದ್ರ ಸರ್ಕಾರ ಕೈಬಿಡಬೇಕು. ವಿಪಕ್ಷ ನಾಯಕರನ್ನು ಗುರಿಯಾಗಿಸಿಕೊಂಡು ಇಡಿ ಸೇರಿದಂತೆ ಕೇಂದ್ರ ತನಿಖಾ ಸಂಸ್ಥೆಗಳನ್ನು ಬಳಸಿಕೊಳ್ಳಲಾಗುತ್ತಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ಹೊರಹಾಕಿದರು.

## ಅಕ್ರಮ ಬಂದೂಕು ಹೊಂದಿದ್ದೀರಾ? ನ. 1ರೊಳಗೆ ಸರ್ಕಾರಕ್ಕೆ ಒಪ್ಪಿಸಿ ಬಿಡಿ: ಡಿಕೆಶಿ ಖಡಕ್ ವಾರ್ನಿಂಗ್



ಬೆಂಗಳೂರು : ಪರವಾನಗಿ ಇಲ್ಲದ ಅಕ್ರಮ ಬಂದೂಕು ಹಾಗೂ ಶಸ್ತ್ರಾಸ್ತ್ರಗಳನ್ನು ನವೆಂಬರ್ 1ರೊಳಗೆ ಸರ್ಕಾರಕ್ಕೆ ತಂದು ಒಪ್ಪಿಸಿಬಿಡಿ. ಸ್ವಯಂಪ್ರೇರಿತವಾಗಿ ಬಂದು ಶರಣಾದರೆ ಯಾವುದೇ ಪ್ರಕರಣ ಹಾಕಲ್ಲ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಕ್ರಮ ಬಂದೂಕುಗಳಿಂದ ಹಲವು ಅರಣ್ಯ ಸಿಬ್ಬಂದಿ ಪ್ರಾಣ ಕಳೆದುಕೊಂಡಿದ್ದಾರೆ. ತಮ್ಮ ಹಾಗೂ ಜಾನುವಾರುಗಳ ರಕ್ಷಣೆಗಾಗಿ ಬಂದೂಕು ಅಗತ್ಯವಿದ್ದರೆ ಕಡ್ಡಾಯವಾಗಿ ಪರವಾನಗಿ ಪಡೆಯಬೇಕು ಎಂದು ಸಲಹೆ ನೀಡಿ-ದರು. ತಮ್ಮ ಕ್ಷೇತ್ರದಲ್ಲಿ ಈ ಹಿಂದೆ 300ಕ್ಕೂ ಹೆಚ್ಚು ನಾಡ ಬಂದೂಕುಗಳನ್ನು ಸರ್ಕಾರಕ್ಕೆ ಒಪ್ಪಿಸಲಾಗಿತ್ತು. ರಾಜ್ಯದಲ್ಲಿ ಇನ್ನೂ ಹೆಚ್ಚಿನ ಅಕ್ರಮ ಬಂದೂಕುಗಳಿರುವ ಮಾಹಿತಿ ಸರ್ಕಾರಕ್ಕೆ ಇದೆ ಎಂದರು.

ಕಸ್ತೂರಿರಂಗನ್ ವರದಿ ಕುರಿತು ಮಾತನಾಡಿದ ಅವರು, ಮಂಗಳೂರಿಗೆ ಭೇಟಿ ನೀಡಿದ ಬಳಿಕ 3-4 ಜಿಲ್ಲೆಗಳಿಗೆ ತೆರಳಿ ರೈತರನ್ನು ಭೇಟಿಯಾಗುವುದಾಗಿ ಹೇಳಿದರು. ರೈತರ ಸಮಸ್ಯೆ, ಬರ ಹಾಗೂ ಕಸ್ತೂರಿರಂಗನ್ ವರದಿ ಕುರಿತು ವಿಶೇಷ ಅಧಿವೇಶನ ಕರೆಯಲಾಗಿದೆ. ಕರ್ನಾಟಕದ ವನ್ಯಜೀವಿ ಸಂಪತ್ತು ಸಮೃದ್ಧವಾಗಿದ್ದು, ಅರಣ್ಯ ಮತ್ತು ಹಸಿರಿನ ಸಂರಕ್ಷಣೆ ಎಲ್ಲರ ಜವಾಬ್ದಾರಿ ಎಂದರು.

ತೇಗದ ಸಿರಿ ಯೋಜನೆಯಿಂದ ರೈತರಿಗೆ ಹೆಚ್ಚಿನ ಲಾಭವಾಗಲಿದ್ದು, ಯೋಜನೆ ಯಶಸ್ವಿಯಾಗಲು ಅರಣ್ಯ ಇಲಾಖೆ ಶ್ರಮಿಸಬೇಕು ಎಂದರು. ನಗರ ಪ್ರದೇಶಗಳಲ್ಲಿನ ಅರಣ್ಯ ಇಲಾಖೆಯ ಜಾಗದಲ್ಲಿ ಟ್ರೀ ಪಾರ್ಕ್‌ಗಳನ್ನು ನಿರ್ಮಿಸಿ ನಗರದ ಹಸಿರು ವಲಯ ಹೆಚ್ಚಿಸುವ ಉದ್ದೇಶವಿದೆ ಎಂದು ತಿಳಿಸಿದರು.

## ಹರಿಹರದಲ್ಲಿ ಎಸ್‌ಸಿ, ಎಸ್‌ಟಿ ಕುಂದು ಕೊರತೆ ಸಭೆ ಆಯೋಜಿಸಲು ಆಗ್ರಹ

ಹರಿಹರ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಹರಿಹರ ತಾಲ್ಲೂಕು ಮಟ್ಟದ ಕುಂದು ಕೊರತೆ ಸಭೆ ನಡೆಸಬೇಕು ಎಂದು ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿಸಿದ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಹರಿಹರ ತಾಲ್ಲೂಕು ಘಟಕದ ಸಂಚಾಲಕ ಪಿ.ಜೆ. ಮಹಾಂತೇಶ್ ಆಗ್ರಹಿಸಿದರು.

ಈ ಹಿಂದೆ ಪ್ರತಿ ಮೂರು ತಿಂಗಳಿಗೊಮ್ಮೆ ಸಮಾಜ ಕಲ್ಯಾಣ ಇಲಾಖೆಯಿಂದ ಎಸ್.ಸಿ., ಎಸ್.ಟಿ. ಕುಂದು-ಕೊರತೆ ಸಭೆಗಳನ್ನು ನಡೆಸಲಾಗುತ್ತಿತ್ತು. ಆ ಸಭೆಗಳಲ್ಲಿ ತಳ ಸಮುದಾಯದ ಮುಖಂಡರು ಭಾಗವಹಿಸಿ ತಮ್ಮ ಸಮುದಾಯದ ಜನ ಸಾಮಾನ್ಯರು ನಿತ್ಯ ಎದುರಿಸುತ್ತಿರುವ ಸಮಸ್ಯೆಗಳನ್ನು ಇಲಾಖಾಧಿಕಾರಿಗಳ ಮುಂದೆ ಪ್ರಸ್ತಾಪಿಸಿ ಪರಿಹಾರ ಪಡೆಯುತ್ತಿದ್ದರು' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. 'ನಾಲ್ಕೈದು ವರ್ಷಗಳ ಹಿಂದೆ ಇಂತಹ ಸಭೆ ನಡೆಸಿದ್ದು ಬಿಟ್ಟರೆ ಈವರೆಗೆ ಸಭೆ ಕರೆದಿಲ್ಲ. ಇಂತಹ ಸಭೆಗಳು ತಾಲ್ಲೂಕು ಮಟ್ಟದ ಜೊತೆಗೆ ಹೋಬಳಿ ಹಾಗೂ ಗ್ರಾಮ ಪಂಚಾಯಿತಿ ಮಟ್ಟದಲ್ಲೂ ನಿಯಮತವಾಗಿ ನಡೆಸಬೇಕು ಎಂದು ಒತ್ತಾಯಿಸಿದ್ದಾರೆ.

## ವಿಶ್ವ ಕೌಶಲ್ಯ ಸ್ಪರ್ಧೆಗೆ ನೋಂದಾಣಿ ಪ್ರಕ್ರಿಯೆ

ದಾವಣಗೆರೆ : ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದ ವತಿಯಿಂದ ಕರ್ನಾಟಕ ರಾಜ್ಯ ಒಲಂಪಿಕ್‌ನ್ನು 2026-27 ರಲ್ಲಿ ಆಯೋಜಿಸಲಾಗಿದೆ. ಜಪಾನ್ ದೇಶದ ಐಚಿ ನಗರದಲ್ಲಿ ನಡೆಯಲಿರುವ "ವಿಶ್ವ ಕೌಶಲ್ಯ ಸ್ಪದ-ರ್ಧೆ-2028 ಜಾಗತಿಕ ಸ್ಪರ್ಧೆಯಲ್ಲಿ ಭಾರತವನ್ನು ಪ್ರತಿನಿಧಿಸಲು ಬಯಸುವ ಯುವಕ-ಯುವತಿಯರಿಗೆ ಆಸಕ್ತ ಯುವಕ-ಯುವತಿಯರು ನೋಂದಾಣೆ ಮಾಡಿಕೊಳ್ಳಬಹುದು. ಪ್ರತಿ ಎರಡು ವರ್ಷಗಳಿಗೊಮ್ಮೆ ನಡೆಯುವ ವಿಶ್ವ ಕೌಶಲ್ಯ ಸ್ಪರ್ಧೆಯು ಜಗತ್ತಿನ ಅತಿ ದೊಡ್ಡ ವೃತ್ತಿಪರ ಸ್ಪರ್ಧೆಯಾಗಿದೆ. ಮುಂಬರುವ 2028ರ ವಿಶ್ವ ಕೌಶಲ್ಯ ಸ್ಪರ್ಧೆಯು ಜಪಾನ್ ದೇಶದ ಐಚಿ ನಗರದಲ್ಲಿ ನಡೆಯಲಿದೆ. ನೋಂದಾಯಿಸಿಕೊಳ್ಳಲು ಸೆಪ್ಟೆಂಬರ್ 15 ಕೊನೆಯದಿನವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ WWW.skillindiagital.gov.in ಹಾಗೂ ದೂ.ಸಂ: 919606492216 ನ್ನು ಸಂಪರ್ಕಿಸಬಹುದೆಂದು ಇಲಾಖೆಯ ಅಧಿಕಾರಿ ತಿಳಿಸಿದ್ದಾರೆ.

## ಗಣೇಶ ವಿಗ್ರಹಗಳ ತಾತ್ಕಾಲಿಕ ವಿಸರ್ಜನಾ ವ್ಯವಸ್ಥೆಗೆ ನಿಗದಿಪಡಿಸಿರುವ ಸ್ಥಳ

ದಾವಣಗೆರೆ : ಸೆಪ್ಟೆಂಬರ್ 14, 16 ಮತ್ತು 18 ರಂದು ಶ್ರೀ ಗಣೇಶ ವಿಗ್ರಹಗಳ ತಾತ್ಕಾಲಿಕ ವಿಸರ್ಜನಾ ವ್ಯವಸ್ಥೆಗೆ ನಿಗದಿಪಡಿಸಿರುವ ಸ್ಥಳಗಳ ವಿವರ : ವಾರ್ಡ್ ಸಂಖ್ಯೆ 6 ಹಗೆದಿಬ್ಬ ವೃತ್ತ, ಗಾಂಧಿನಗರ, ರಾಜಕುಮಾರ ಶಾಲೆ ಹತ್ತಿರ, ಕುರುಬರ ಕೇರಿ, ಮೈಲಾರಲಿಂಗೇಶ್ವರ ದೇವಸ್ಥಾನದ ಹತ್ತಿರ ಕೊಂಡಜ್ಜಿ ರಸ್ತೆ, ವಾರ್ಡ್ ಸಂ-7 ಕೋರ್ಟ್ ಹಿಂಭಾಗ, ದೇವರಾಜ ಅರಸ್ ಬಡಾವಣೆ, ವಾರ್ಡ್ ಸಂ: 10 ಶಿವಾಜಿ ವೃತ್ತ, ದುಗಾರ್ಂಬಿಕ ದೇವಸ್ತಾನದ ಹತ್ತಿರ ಕುರುಬರ ಕೇರಿ, ಹೊಂಡದ ವೃತ್ತ, ವಾರ್ಡ್ ಸಂ: 11 ವೆಂಕಟೇಶ್ವರ ವೃತ್ತ, ಬೇತೂರು ರಸ್ತೆ, ವಾರ್ಡ್ ಸಂ: 14 ವಿಠಲ ಮಂದಿರ ಹತ್ತಿರ, ಮಹಾರಾಜ ಪೇಟೆ, ಹಾಸಬಾವಿ ವೃತ್ತದ, ಚೌಕಿಪೇಟೆ, ವಾರ್ಡ್ ಸಂ: 16 ಪಾರ್ಕ್ ಹತ್ತಿರ, 3ನೇ ಮುಖ್ಯ ರಸ್ತೆ, ವಿನೋಬನಗರ, ವಾರ್ಡ್ ಸಂ: 17 ರಾಮ್ ಆಂಡ್ ಕೋ ಸರ್ಕಲ್, ಪಿ.ಜೆ.ಬಡಾವಣೆ, ವಾರ್ಡ್ ಸಂ: 18 ಬಸವೇಶ್ವರ ವೃತ್ತ, ಕಾಯಿಪೇಟೆ, ವಾರ್ಡ್ ಸಂ: 20 ಗಣೇಶ ಹೋಟೆಲ್ ಹತ್ತಿರ, ಬಂಬೂ ಬಜಾರ್, ವಾರ್ಡ್ ಸಂ: 23 ಬನ್ನಿಮರದ ಹತ್ತಿರ, ರಿಂಗ್ ರಸ್ತೆ, ಎಸ್. ಎಸ್ ಲೇಔಟ್, ವಾರ್ಡ್ ಸಂ: 24 ಬಕೇಶ್ವರ ಸ್ಕೂಲ್ ಮುಂಭಾಗ, ಎಂ.ಸಿ.ಸಿ ಎ ಬ್ಲಾಕ್, ವಾರ್ಡ್ ಸಂ: 25 ಜಯದೇವ ವೃತ್ತ, ಕೆ.ಬಿ.ಬಡಾವಣೆ, ವಾರ್ಡ್ ಸಂ: 25 ಡಿ.ಸಿ.ಎಂ ಲೇಔಟ್ ಸರ್ಕಲ್, ಡಿಸಿಎಂ ಲೇ ಔಟ್, ವಾರ್ಡ್ ಸಂ: 30 ಸರ್ಕಾರಿ ಶಾಲೆ ಹತ್ತಿರ, ಅವರಗೆರೆ, ವಾರ್ಡ್ ಸಂ: 33 ಪಂಚಮುಖಿ ಆಂಜನೇಯ ದೇವಸ್ಥಾನದ ಹತ್ತಿರ, ಸರಸ್ವತಿ ಬಡಾವಣೆ, ವಾರ್ಡ್ ಸಂ: 34 ಸಂಜೀವಿನಿ ಆಂಜನೇಯ ದೇವಸ್ಥಾನ, ಶಿವಕುಮಾರ ಸ್ವಾಮಿ ಬಡಾವಣೆ, ವಾರ್ಡ್ ಸಂ: 35 ದುಗಾರ್ಂಬಿಕ ದೇವಸ್ಥಾನದ ಹತ್ತಿರ, ನಿಟುವಳ್ಳಿ, ವಾರ್ಡ್ ಸಂ: 36 ಹೆಚ್.ಕೆ.ಆರ್. ಸರ್ಕಲ್, ನಿಟ್ಟುವಳ್ಳಿ, ವಾರ್ಡ್ ಸಂ: 37 ಡಾಂಗೆ ಪಾರ್ಕ್, ಕೆಟಿಜೆ ನಗರ, ವಾರ್ಡ್ ಸಂ: 38 ಬಾಪೂಜಿ ಶಾಲೆ ಹತ್ತಿರ, ಕುವೆಂಪು ನಗರ, ವಾರ್ಡ್ ಸಂ: 38 ಗುಂಡಿ ಮಹಾದೇವಪ್ಪ ಸರ್ಕಲ್, ಎಂ.ಸಿ.ಸಿ. ಎ ಬ್ಲಾಕ್, ವಾರ್ಡ್ ಸಂ: 39 ಈಶ್ವರ ಪಾರ್ವತಿ ದೇವಸ್ಥಾನದ ಹತ್ತಿರ, ವಿದ್ಯಾನಗರ, ವಾರ್ಡ್ ಸಂ: 40 ಆಂಜನೇಯ ದೇವಸ್ತಾನದ ಹತ್ತಿರ, ಆಂಜನೇಯ ಬಡಾವಣೆ, ಬಾಪೂಜಿ ಬ್ಯಾಂಕ್ ಹತ್ತಿರ, ಬಿ.ಐ.ಇ.ಟಿ ರಸ್ತೆ, ಆಂಜನೇಯ ಬಡಾವಣೆ, ವಾರ್ಡ್ ಸಂ: 43 ಶ್ರೀರಾಮ ಮಂದಿರದ ಹತ್ತಿರ, ಶ್ಯಾಮನೂರು, ವಾರ್ಡ್ ಸಂ: 45 ಆರ್.ಟಿ.ಓ ಆಫೀಸ್ ಹತ್ತಿರ ಕೊಂಡಜ್ಜಿ ರೋಡ್. ಕೃತಕ ವಿಸರ್ಜನಾ ಹೊಂಡಗಳ ವಿವರ: ಬಾತಿ ಕೆರೆ ಹತ್ತಿರ, ಬೈಪಾಸ್ ಚಾನಲ್ ಹತ್ತಿರ, ಬಳ್ಳಾರಿ ಸಿದ್ದಮ್ಮ ಪಾರ್ಕ್ ಹತ್ತಿರ, ಡಿಸಿಎಂ ನ ನೀರಿನ ಘಟಕದ ಹಿಂಭಾಗದಲ್ಲಿ ವಿಸರ್ಜನೆ ಮಾಡಬೇಕೆಂದು ಪಾಲಿಕೆ ಆಯುಕ್ತರಾದ ಡಾ.ಮಹಾಂತೇಶ್ ತಿಳಿಸಿದ್ದಾರೆ.

# ಸೆ.19ಕ್ಕೆ ಉಪ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಪ್ರಜಾ ಸೇವೆ ಆಂದೋಲನ ಕಾರ್ಯಕ್ರಮ ಆಯೋಜನೆ

ಕುಣಿಗಲ್ ; ತಾಲ್ಲೂಕಿನ ಹುಲಿಯೂರುದುರ್ಗ ಪಟ್ಟಣದಲ್ಲಿ ಸೆಪ್ಟೆಂಬರ್ 19ರ ಶನಿವಾರ ದಂದು ಉಪ ಮುಖ್ಯಮಂತ್ರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಜಿ ಪರಮೇಶ್ವರ ಅಧ್ಯಕ್ಷತೆಯಲ್ಲಿ ಪ್ರಜಾಸೇವೆ ಆಂದೋಲನ ಅಮ್ಮಿಕೊಳ್ಳಲಾಗಿದೆ ಎಂದು ಅಪರ ಜಿಲ್ಲಾಧಿಕಾರಿ ತಿಪ್ಪೇಸ್ವಾಮಿ ತಿಳಿಸಿದರು,

ಹುಲಿಯೂರುದುರ್ಗ ಪಟ್ಟಣದ ಹುಲಿಯೂರಮ್ಮ ಸಮುದಾಯ ಭವನದಲ್ಲಿ ಗುರುವಾರ ಹಮ್ಮಿಕೋಳ್ಳಲಾಗಿದ್ದ ಪ್ರಜಾ ಸೇವೆ ಆಂದೋಲನದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು ಪ್ರಜಾಸೇವೆ ಆಂದೋಲನ ಕಾರ್ಯಕ್ರಮ ಅಮ್ಮಿಕೋಳ್ಳಲಾಗಿದ್ದು, ಕಾರ್ಯಕ್ರಮದಲ್ಲಿ ಸಂಸದರು ಹಾಗೂ ಶಾಸಕರು ವಿಧಾನಪರಿಷತ್ ಸದಸ್ಯರು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತಿ ಇರಲಿದ್ದು, ಸಾರ್ವಜನಿಕರು ತಮ್ಮ ಸಮಸ್ಯೆಗಳ ಬಗ್ಗೆ ಮನವಿ ಸಲ್ಲಿಸಿ ಪರಿಹಾರ ಕಂಡುಕೊಳ್ಳಬಹುದಾಗಿದ್ದು ಇದರ ಸದುಪಯೋಗ ಪಡೆದುಕೊಳ್ಳುವಂತೆ ಸಮಸ್ಯೆ ಹೊಂದಿರುವ ರೈತರು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕಾರ್ಯಕ್ರಮದ ಬಗ್ಗೆ ಅಧಿಕಾರಿಗಳು ಪ್ರಚಾರ ಪಡಿಸಲಿದ್ದು ಅರ್ಜಿಗಳನ್ನು ವಿತರಿಸಲಾಗುವುದು



ಅರ್ಜಿ ಪಡೆದ ಸಾರ್ವಜನಿಕರು ತಮ್ಮ ಸಮಸ್ಯೆಗಳ ಬಗ್ಗೆ ಅರ್ಜಿಯಲ್ಲಿ ನಮುದಿಸಿ ಸಂಬಂಧ ಪಟ್ಟ ಇಲಾಖೆಯ ಅಧಿಕಾರಿಗಳಿಗೆ ಅಥಾವ ಉಪ ಮುಖ್ಯ ಮಂತ್ರಿಗಳಿಗೆ ನೀಡತಕ್ಕದ್ದು,ಅರ್ಜಿ ಪಡೆದ ನಂತರ ಐ.ಪಿ.ಜಿ.ಆರ್. ಎಸ್ ಮೂಲಕ ಸಿಕೃತಿ ನೀಡಲಾಗುವುದು, ಕಾರ್ಯಕ್ರಮದ ದಿನದಂದು ಸಾರ್ವಜನಿಕರ ಅಹವಾಲು ಸ್ವೀಕರಿಸಲು ಇಲಾಖವಾರು ಕೌಂಟ–ರ್ ಗಳನ್ನು ತೆರೆಯಲಾಗುವುದು ಸಾರ್ವಜನಿಕರು ಇದರ ಸದುಪಯೋಗ ಪಡಿಸಿಕೊಳ್ಳುವಂತೆ ಮನವಿ ಮಾಡಿದರು. ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಸಕಲ ಸಿದ್ದತೆ ಮಾಡಿಕೊಳ್ಳುವಂತೆ ಸೂಚಿಸಿದರು

ಉಪ ವಿಭಾಗಾಧಿಕಾರಿ ನಾಹೀದ ಜಮ್ ಜಮ್,ತಹಶೀಲ್ದಾರ್ ಕರಿಯ ನಾಯ್ಕ್,ತಾಲ್ಲೂಕು ಪಂಚಾಯ್ತಿ ಕಾರ್ಯನಿರ್ವಹಣ ಅಧಿಕಾರಿಯ ವಸಂತ್ ಕುಮಾರ್, ಕ್ಷೇತ್ರ ಶಿಕ್ಷಣಾಧಿಕಾರಿ ಮಮತಾಮಣಿ. ಉಪ ತಹಶೀಲ್ದಾರ್ ಜಗದೀಶ್,ಕಂದಾಯ ಇಲಾಖೆಯ ಸೇರಿದಂತೆ ತಾಲ್ಲೂಕು ಮಟ್ಟದ ಅಧಿಕಾರಿಗಳು ಸಿಬ್ಬಂದಿವರ್ಗ ಉಪಸ್ಥಿತರಿದ್ದರು.

## ಕೆರೆಗಳು ಖಾಲಿ: ಒಣಗಿದ ಬೆಳೆ, ಕಂಗಾಲಾದ ರೈತರು

# ಹುಣಸೂರಲ್ಲಿ ನೀರಿಗಾಗಿ ಹಾಹಾಕಾರ




ಹುಣಸೂರು ತಾಲೂಕು ಬೆಳ್ತೂರ್ ಕೆರೆ ಗೌಡಗೆರೆ ಹೋಬಳಿ ಮತ್ತು ಹುಣಸೂರು ತಾಲೂಕಿನ ಸುತ್ತಮುತ್ತ ಗ್ರಾಮಗಳ ಕೆರೆ ನೀರಿಲ್ಲದೆ ಒಣಗಿರುವುದು. ಈ ಬಾರಿ ಮಳೆ ಇಲ್ಲದೆ ಮತ್ತು ಹಾರಂಗಿ ನೀರು ಬಿಡದೆ ಕೆರೆ ಖಾಲಿಯಾಗಿ ರೈತರ ವ್ಯವಸಾಯಕ್ಕೆ ನೀರಿಲ್ಲ ದನ ಕರು ಕುಡಿಯಲು ನೀರಿಲ್ಲ ಹಾರಂಗಿ ನೀರು ಬಿಟ್ಟರೆ ಮಾತ್ರ ಕೆರೆ ತುಂಬುವುದು ಈ ಬಾರಿ ನೀರು ಬಿಟ್ಟಿಲ್ಲ ಈಕೆರೆ ತುಂಬಾ ಬೇಕಾದರೆ ಇನ್ನು ಮೂರು ಕೆರೆ ತುಂಬಿದ ನಂತರ ಈ ಕೆರೆ ತುಂಬುವುದು ಈ ಬಾರಿ ಯಾವ ಕೆರೆಯು ನೀರಿಲ್ಲ, ಬೆಳ್ತೂರು ಕೆರೆ ಅಚ್ಚುಕಟ್ಟು ಪ್ರದೇಶದಲ್ಲಿ ರೈತರು ವಿವಿಧ ಬೆಳೆ ಬೆಳೆದಿದ್ದು ನೀರಿಲ್ಲದೆ ರಾಗಿ, ಜೋಳ ತರಕಾರಿ, ಹೂವು, ಪರಂಗಿ, ತರಕಾರಿ ಇತರ ಬೆಳೆಗಳು ಬೆಳೆದಿದ್ದು ನೀರಿಲ್ಲದೆ ಎಲ್ಲ ಒಣಗುತ್ತಿದೆ ಇಂದು ರೈತ ಕಣ್ಣೀರು ಹಾಕಿದರು ಬೋರ್ವೆಲ್ ಗಳಲ್ಲೂ ಸಹ ನೀರಿನ ಮಟ್ಟ ಕಡಿಮೆಯಾಗುತ್ತಿದೆ .ಮುಂದೆ ರೈತನ ಪರಿಸ್ಥಿತಿ ಊಹಿಸಲು ಅಸಾಧ್ಯ ಇನ್ನಾದರೂ ಹಾರಂಗಿ ಅಧಿಕಾರಿಗಳು ಇತ್ತ ಗಮನ ಹರಿಸಿ, ಕೆರೆಗೆ ನೀರು ಹರಿಸಲಿ ಇಲ್ಲದಿದ್ದರೆ ಕೆರೆಯಲ್ಲಿ ಕುಳಿತು ಧರಣಿ ನಡೆಸುವುದಾಗಿ ರೈತ ಮುಖಂಡರು ಎಚ್ಚರಿಕೆ ನೀಡಿದ್ದಾರೆ

# ಪ್ರತಿಭಾ ಪುರಸ್ಕಾರ ಮಾನದಂಡ 90 ರಿಂದ 80ಕ್ಕೆ ಇಳಿಕೆ ; ಕೆಸಿಆರ್ ಕೊಂಡವಾಡಿ ಚಂದ್ರಶೇಖರ್‌ಗೆ ಕ್ಷೇತ್ರದ ಜನ ಬೆಂಬಲವಿರಲಿ ; ಎಂ.ಆರ್.ಜೆ.



ಮಧುಗಿರಿ ; ತಾಲೂಕಿನಲ್ಲಿ ಬರಗಾಲ ಹೆಚ್ಚಾಗುತ್ತಿದ್ದು ರೈತರ ಮಕ್ಕಳಿಗೆ ವಿದ್ಯಾಭ್ಯಾಸದ ಪ್ರತಿಭಾ ಪುರಸ್ಕಾರದ ಸಹಾಯಧನವನ್ನು ನೀಡಲು ಶೇಕಡ 90ರಷ್ಟಿದ್ದ ಮಾನದಂಡವನ್ನು ಶೇ. 80 ಕ್ಕೆ ಇಳಿಸಲು ಕ್ರಮ ವಹಿಸುವುದಾಗಿ ತುಮುಲ್ ಮಾಜಿ ಅಧ್ಯಕ್ಷ, ಹಾಲಿ ನಿರ್ದೇಶಕ ಕೊಂಡವಾಡಿ ಚಂದ್ರಶೇಖರ್ ಘೋಷಿಸಿದರು.

ಪಟ್ಟಣದ ಸಿಪಿಸಿ ಸಭಾಂಗಣದಲ್ಲಿ ತುಮುಲ್ ವತಿಯಿಂದ ನಡೆದ ಕ್ಷೇತ್ರದ ಕಾರ್ಯದರ್ಶಿಗಳ ಪ್ರಾದೇಶಿಕ ಸಭೆ ಹಾಗೂ ಹಾಲು ಉತ್ಪಾದಕರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ರೈತರ ಬೇಡಿಕೆಯಂತೆ ಹಾಲು ಉತ್ಪಾದಕರ ಪ್ರತಿಭಾವಂತ ಮಕ್ಕಳಿಗೆ ನೀಡುವ ವಿದ್ಯಾಭ್ಯಾಸದ ಪ್ರೋತ್ಸಾಹ ಧನದ ಮಾನದಂಡವನ್ನು ಶೇ.80ಕ್ಕೆ ಇಳಿಸಲು ಕ್ರಮ ವಹಿಸಲಾಗುವುದು. ರೈತರು ಗುಣಮಟ್ಟದ ಹಾಲನ್ನು ನೀಡಿದಾಗ ಮಾತ್ರ ಒಕ್ಕೂಟವು ಸದೃಢವಾಗಿ ಇಷ್ಟೆಲ್ಲ ಸೌಲಭ್ಯಗಳನ್ನು ನೀಡಲು ಸಹಕಾರಿಯಾಗಲಿದೆ. ಯಾವುದೇ ಒಕ್ಕೂಟ–ಕ್ಕೆ ಸರ್ಕಾರದಿಂದ ಯಾವುದೇ ಅನುದಾನವೂ ಸಹ ಬರುವುದಿಲ್ಲ. ನೀವು ನೀಡುವ ಹಾಲನ್ನು ಮಾರಾಟ ಮಾಡಿ ಬಂದ ಲಾಭದಲ್ಲಿ ಇದನ್ನೆಲ್ಲ ನೀಡಲು ಮಾತ್ರ ಸಾಧ್ಯವಿದ್ದು, ಗುಣಮಟ್ಟದ ಹಾಲನ್ನು ನೀಡಲು ರೈತರು ಮುಂದಾಗಬೇಕು ಎಂದರು.

ನನ್ನ ಅಧಿಕಾರಾವಧಿಯಲ್ಲಿ ರೈತ ಕಲ್ಯಾಣ ಟ್ರಸ್ಟ್ ಸ್ಥಾಪಿಸಿದ್ದು ಹಾಲು ಉತ್ಪಾದಕರಿಗೆ ವಿಶೇಷ ಅನುದಾನ, ರಾಸುಗಳಿಗೆ ಉಚಿತ ವಿಮೆ, ಪ್ರತಿಭಾವಂತ ಮಕ್ಕಳಿಗೆ ಧನಸಹಾಯ, ಮೃತಪಟ್ಟ ಹೈನುಗಾರರು ಹಾಗೂ ಮೃತ ರಾಸುಗಳಿಗೆ ಮರಣ ವಿಮೆ ಪರಿಹಾರವನ್ನ ನೀಡಲು ಸಾಧ್ಯವಾಗಿದೆ. ಅಲ್ಲದೆ ಮಕ್ಕಳಿಗೆ ಜಿಲ್ಲಾ ಕೇಂದ್ರದಲ್ಲಿ ಉಚಿತ ಹಾಸ್ಟೆಲ್ ವ್ಯವಸ್ಥೆಯನ್ನು ಸಹ ಕಲ್ಪಿಸಲಾಗಿದ್ದು ಈ ರೈತ ಕಲ್ಯಾಣ ಟ್ರಸ್ಟ್ ಯೋಜನೆಯು ಇಡೀ ರಾಜ್ಯದಲ್ಲಿ ತುಮುಲ್ ನಲ್ಲಿ ಮಾತ್ರ ನೀಡಲಾಗುತ್ತಿದೆ. ಇದಕ್ಕೆ ನೀವು ನೀಡುವ ಗುಣಮಟ್ಟದ ಹಾಲು ಕಾರಣವಾಗಿದೆ. ಮುಂದೆ ಒಕ್ಕೂಟದ ಅಭಿವೃದ್ಧಿಗೆ ಹಾಗೂ ನಮಗೆ ನಿಮ್ಮೆಲ್ಲರ ಆಶೀರ್ವಾದ ಇರಲಿ ಎಂದು ಮನವಿ ಮಾಡಿಕೊಂಡರು.

ತುಮುಲ್ ಮಧುಗಿರಿಯ ಮ್ಯಾನೇಜರ್ ಚಂದ್ರಶೇಖರ್ ಕೆದನೂರಿ ಮಾತನಾಡಿ ಬರಗಾಲವು ಹೈನುಗಾರಿಕೆಗೆ ಸವಾಲಾಗಿದೆ. ಬರಗಾಲದ ಕಾರಣದಿಂದ ಒಕ್ಕೂಟದಿಂದ ಈಗಾಗಲೇ ಲೀಟರ್ ಗೆ 1 ರೂ. ಹೆಚ್ಚುವರಿ ದರವನ್ನು ನೀಡುತ್ತಿದೆ. ಇದರ ಜೊತೆ ಮೇವಿನ ಅಭಾವ ಹೆಚ್ಚಾಗಿದ್ದು ಒಕ್ಕೂಟ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಆಡಳಿತ ಮಂಡಳಿ ತಿಳಿಸಿದೆ. ಮಳೆಯ ಕೊರತೆಯಿಂದ ಹಾಲು ಉತ್ಪಾದನೆ ಕಡಿಮೆಯಾಗಿದ್ದು ಕಳೆದ ವರ್ಷ ಇದೇ ಸಮಯದಲ್ಲಿ 1.6 ಲಕ್ಷ ಲೀಟರ್ ಇದ್ದ ಹಾಲು ಉತ್ಪಾದನೆ, ಪ್ರಸ್ತುತ 1.07 ಲಕ್ಷ ಲೀಟರ್ ಗೆ ಇಳಿದಿದೆ. ವ್ಯವಸಾಯಕ್ಕೆ ಹೈನುಗಾರಿಕೆಯು ಪರ್ಯಾಯ ಮಾರ್ಗವಾಗಿದ್ದು ಹಾಲು ಉತ್ಪಾದಕರಿಗೆ ಹಾಗೂ ಡೇರಿ ಕಟ್ಟಡ ನಿರ್ಮಾಣಕ್ಕೆ ಒಕ್ಕೂಟದಿಂದ ಹಾಗೂ ಧರ್ಮಸ್ಥಳ ಸಂಘದಿಂದ ಸಹಯಾಧನ ನೀಡಲಾಗುತ್ತದೆ.

ಕೊಂಡವಾಡಿ ಚಂದ್ರಶೇಖರ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ರೈತ ಕಲ್ಯಾಣ ಟ್ರಸ್ಟ್ ಸ್ಥಾಪಿಸಿದ್ದು ತುಮಲ್ ಇತಿಹಾಸದಲ್ಲಿ ದಾಖಲಾಗಿದೆ. ತಾಲೂಕಿನಲ್ಲಿ ಕೊಂಡವಾಡಿ ಚಂದ್ರಶೇಖರ್ ನೇತೃತ್ವದಲ್ಲಿ ಹೈನೋದ್ಯಮ ಉನ್ನತ ಮಟ್ಟಕ್ಕೆ ಹೋಗಿದ್ದು ಮುಂದೆಯೂ ಅವರು ರೈತರ ಪರವಾಗಿ ನಿಲ್ಲುವ ವಿಶ್ವಾಸವಿದೆ ಎಂದರು.

> **ಲೀ.ಗೆ. 20 ರೂ. ಹೆಚ್ಚಿಸಿ ;**
> ರಾಜ್ಯದಲ್ಲಿ ಬರಗಾಲವಿದೆ. ವ್ಯವಸಾಯ ಸತ್ತಿದೆ. ಹೈನೋದ್ಯಮ ನಡೆಸಲು ರೈತರಿಗೆ ಮೇವಿನ ಕೊರತೆಯಿದೆ. ಫೀಡ್ ಬೆಲೆ ಹೆಚ್ಚಿದೆ. ಕುಡಿಯುವ ಮದ್ಯದ ದರವನ್ನು ಶೇ.20 ರಿಂದ ಶೇ.80 ರಷ್ಟು ಹೆಚ್ಚಿಸುವ ಸರ್ಕಾರ, ಹಾಲಿನ ದರವನ್ನು ಕನಿಷ್ಠ ಲೀಟರ್ ಗೆ 20 ರೂ ಹೆಚ್ಚಿಸಿ ರೈತರ ನೆರವಿಗೆ ನಿಲ್ಲಬೇಕು. ಈ ನಿಟ್ಟಿನಲ್ಲಿ ಒಕ್ಕೂಟವು ಯಾವ ರೂಪದಲ್ಲಾದರೂ ನೆರವಿನ ಹಸ್ತ ಚಾಚಬೇಕು.
> – ನೊಂದ ರೈತರು.

ಪುರಸಭಾ ಮಾಜಿ ಸದಸ್ಯ ಎಂ.ಆರ್. ಜಗಣ್ಣ ಮಾತನಾಡಿ ಕೊಂಡವಾಡಿ ಚಂದ್ರಶೇಖರ್ ಯಾವುದೇ ಕ್ಷೇತ್ರದಲ್ಲಿ ಇದ್ದರೂ ಉತ್ತಮ ಸಾಧನೆಯನ್ನ ಮಾಡುವಂತಹ ವ್ಯಕ್ತಿತ್ವ ಹೊಂದಿದ್ದಾರೆ. ತಾಲೂಕಿನಲ್ಲಿ ಹೈನುಗಾರರಿಗೆ ಅವರ ಸೇವೆ ಸಿಕ್ಕಿರುವುದು ನಿಜಕ್ಕೂ ಪುಣ್ಯ. ಮುಂದಿನ ರಾಜಕೀಯ ಶಕ್ತಿಗೆ ತಾಲೂಕಿನ ಜನತೆ ಹಾಗೂ ಯುವಶಕ್ತಿ ಜೊತೆಯಾಗಿ ನಿಲ್ಲಬೇಕು ಎಂದು ಮನವಿ ಮಾಡಿದರು.

ಜಿಲ್ಲಾ ರೈತಸಂಘದ ಪ್ರಧಾನ ಕಾರ್ಯದರ್ಶಿ ಜೆ.ಸಿ.ಶಂಕರಪ್ಪ ಮಾತನಾಡಿ ರಾಜ್ಯದಲ್ಲಿ ಎಲ್ಲ ಕ್ಷೇತ್ರದಂತೆ ಕ್ಷೀರಕ್ರಾಂತಿಯೂ ಖಾಸಗೀಕರಣ ಆಗುತ್ತಿದ್ದು, ಬಡವರು, ರೈತರು ನಲುಗಿದ್ದಾರೆ. ಈಗ ಹೈನೋದ್ಯಮವೂ ಖಾಸಗೀಕರಣದ ಹಾದಿಯತ್ತ ಸಾಗುತ್ತಿದ್ದು ರೈತರು ಎಚ್ಚರದಿಂದ ಇದ್ದು ನಿಮ್ಮದೇ ಸಂಸ್ಥೆಯಾದ ಕೆಎಂಎಫ್ ಹಾಗೂ ತುಮುಲ್ ಒಕ್ಕೂಟವನ್ನು ಗುಣಮಟ್ಟದ ಹಾಲು ಪೂರೈಸುವ ಮೂಲಕ ಉಳಿಸಿಕೊಳ್ಳಬೇಕು. ಈ ಬರಗಾಲದಲ್ಲಿ ಸರ್ಕಾರ ಕೂಡ ಒಕ್ಕೂಟಗಳ ನೆರವಿಗೆ ನಿಲ್ಲಬೇಕು ಎಂದರು.

ಈ ಸಂದರ್ಭದಲ್ಲಿ ಜಿ.ಪಂ. ಮಾಜಿ ಸದಸ್ಯ ಎಸ್.ಡಿ.ಕೃಷ್ಣಪ್ಪ, ಸುಜಾತ ಸಿಡದರಗಲ್ಲು ಶ್ರೀನಿವಾಸ್, ತಾ.ಪಂ. ಮಾಜಿ ಅಧ್ಯಕ್ಷ ಸುನಂದಾ ಸಿದ್ದಪ್ಪ, ಮಾಜಿ ಸದಸ್ಯರಾದ ದೊಡ್ಡಯ್ಯ, ಗೀತಾ ಆನಂದ, ಮಾಜಿ ಎಪಿಎಂಸಿ ಸದಸ್ಯ ಕೂರ್ಲಪ್ಪ, ತಾಲೂಕು ಕುಂಚಿಟಿಗ ಒಕ್ಕಲಿಗರ ಸಂಘದ ಅಧ್ಯಕ್ಷ

ರಾಜಶೇಖರ, ಉಪಾಧ್ಯಕ್ಷ ಜಗಪ್ಪ, ಮುಖಂಡರಾದ ಗುಟ್ಟೆ ವೀರೇಂದ್ರ, ಕಾಂತಣ್ಣ, ವನಜಾಕ್ಷಿ ದಾಸೇಗೌಡ, ಕೇಂದ್ರದ ವ್ಯವಸ್ಥಾಪಕ ದಿವಾಕರ್, ಸಿಬ್ಬಂದಿಗಳಾದ ಧರ್ಮವೀರ, ದರ್ಶನ್, ಮಾರೇಗೌಡ, ಬೆಲ್ಲದಮಡು ರವಿಚಂದ್ರ, ಮಂಜು, ಹಾಗೂ ಇತರರಿದ್ದರು.

# ಪ್ರಥಮ ಪ್ರಯತ್ನದಲ್ಲಿಯೇ ರಾಜ್ಯ ಮಟ್ಟಕ್ಕೆ ಆಯ್ಕೆಯಾದ ಜನನಿ ಕಾಲೇಜಿನ ವಿದ್ಯಾರ್ಥಿಗಳು



ಕುಣಿಗಲ್ : ತುಮಕೂರಿನಲ್ಲಿ ನೆಡೆದ 2026 –27 ನೇ ಶೈಕ್ಷಣಿಕ ಸಾಲಿನಲ್ಲಿ ನೂತನವಾಗಿ ಪ್ರಾರಂಭವಾಗಿರುವ ಪಟ್ಟಣದ ಜನನಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಹಲವು ಗುಂಪು ಆಟಗಳಲ್ಲಿ ಗೆಲುವು ಸಾಧಿಸಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗುವುದರ ಮುಖಾಂತರ ತಾಲೂಕಿನ ಕ್ರೀಡಾಭಿಮಾನಿಗಳು ಮತ್ತು ನಾಗರೀಕರ ಪ್ರಶಂಸೆಗೆ ಪಾತ್ರರಾಗಿದ್ದಾರೆ. ತುಮಕೂರಿನ ಹಲವು ಕ್ರೀಡಾಂಗಣಗಳಲ್ಲಿ ನಡೆದ 2026– 27 ನೇ ಶೈಕ್ಷಣಿಕ ಸಾಲಿನ ಜಿಲ್ಲಾ ಮಟ್ಟದ ಪದವಿ ಪೂರ್ವ ಕಾಲೇಜುಗಳ ಕ್ರೀಡಾಕೂಟದಲ್ಲಿ ಜಿಲ್ಲೆಯ 10 ತಾಲೂಕಿನಿಂದ ಸುಮಾರು 1000 ವಿದ್ಯಾರ್ಥಿಗಳು ಭಾಗವಹಿಸಿದ್ದರು ತಾಲೂಕು ಕ್ರೀಡಾಕೂಟದಲ್ಲಿ ಭಾಗವಹಿಸಿ ಗೆಲುವು ಸಾಧಿಸಿದ್ದ ಜನನಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಜಿಲ್ಲಾಮಟ್ಟದ ಕ್ರೀಡಾಕೂಟದಲ್ಲೂ ಭಾಗವಹಿಸಿ ರಾಜ್ಯಮಟ್ಟಕ್ಕೆ ಆಯ್ಕೆಯಾಗುವುದರ ಮುಖಾಂತರ ಪೋಷಕರು ಮತ್ತು ಕಾಲೇಜಿಗೆ ಕೀರ್ತಿ ತಂದಿರುತ್ತಾರೆ. ಬಾಲಕಿಯರ ವಿಭಾಗದಲ್ಲಿ ಬಿಂದುಶ್ರೀ ಕೆ ಮತ್ತು ಚೈತ್ರ ಟಿ ಎನ್ ರವರು ಖೋ ಖೋ ಪಂದ್ಯ ಲಿಖಿತ ಕೆ ಎಸ್ ಮತ್ತು ಕವಿತಾ ಟಿ ಎಂ ರವರು ವಾಲಿಬಾಲ್ ಪಂದ್ಯ ಶ್ರೇಯಾ ಮತ್ತು ಮಹಾಲಕ್ಷ್ಮಿರವರು ಥ್ರೋ ಬಾಲ್ ಪಂದ್ಯ ಬಾಲಕರ ವಿಭಾಗದಲ್ಲಿ ಸುಹಾಸ್ ಖೋ ಖೋ ಪಂದ್ಯ ಲೋಹಿತ್ ಗೌಡ ಥ್ರೋಬಾಲ್ ಪಂದ್ಯಗಳಲ್ಲಿ ಗೆಲುವು ಸಾಧಿಸಿ ರಾಜ್ಯ ಪಟ್ಟಕ್ಕೆ ಆಯ್ಕೆಯಾಗಿರುತ್ತಾರೆ

ಇದರ ಜೊತೆಗೆ ಕುಣಿಗಲ್ ಶಾಖೆಯ ಭಾರತೀಯ ಜೀವವಿಮ ನಿಗಮ ಇವರು ನಡೆಸಿದ ತಾಲೂಕು ಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ಈ ಕಾಲೇಜಿನ ಹರ್ಷಿತ ಮತ್ತು ಭೂಮಿಕ ರವರು ಭಾಗವಹಿಸಿ ಪ್ರಥಮ ಮತ್ತು ದ್ವಿತೀಯ ಸ್ಥಾನವನ್ನು ಪಡೆಯುವುದರ ಮೂಲಕ ಎಲ್ಲರ ಪ್ರಶಂಸೆಗೆ ಪಾತ್ರರಾಗಿದ್ದಾರೆ

ರಾಜ್ಯಮಟ್ಟಕ್ಕೆ ಆಯ್ಕೆಯಾಗಿರುವ ಎಲ್ಲಾ ವಿದ್ಯಾರ್ಥಿಗಳನ್ನು ಕಾಲೇಜಿನ ಪ್ರಾಚಾರ್ಯ ಕಪನಿಪಾಳ್ಯ ರಮೇಶ್ ಹಾಗೂ ಆಡಳಿತ ಮಂಡಳಿಯವರು ಅಭಿನಂದಿಸಿ ರಾಜ್ಯಮಟ್ಟದಲ್ಲೂ ಯಶಸ್ವಿ ಸಿಗಲೆಂದು ಶುಭ ಹಾರೈಸಿದರು ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಚಾರ್ಯ ಕಪನಿಪಾಳ್ಯ ರಮೇಶ್ ಉಪಪ್ರಾಚಾರ್ಯ ಸದಾಶಿವ ಉಪನ್ಯಾಸಕರಾದ ಲೋಕೇಶ್, ಗಗನ್ ಹಾಗೂ ದೈಹಿಕ ಶಿಕ್ಷಣ ಉಪನ್ಯಾಸಕರಾದ ರಮೇಶರವರು ಉಪಸ್ಥಿತರಿದ್ದರು

# ಗೌರಿ–ಗಣೇಶ ಹಬ್ಬಕ್ಕೆ ಪ್ರಯಾಣಿಕರಿಗೆ ಸಿಹಿಸುದ್ದಿ KSRTC ಯಿಂದ ಹೆಚ್ಚುವರಿ 2,400 ಬಸ್‌ಗಳ ವ್ಯವಸ್ಥೆ

ಬೆಂಗಳೂರು: ಗೌರಿ ಗಣೇಶ ಹಬ್ಬದ ಹಿನ್ನೆಲೆ ಊರುಗಳಿಗೆ ತೆರಳುವ ಪ್ರಯಾಣಿಕರ ಅನುಕೂಲಕ್ಕಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಏಖಖಖಿಅ) ಭರ್ಜರಿ ಸಿದ್ಧತೆ ಮಾಡಿಕೊಂಡಿದೆ. ಪ್ರಯಾಣಿಕರ ದಟ್ಟಣೆ ಗಮನದಲ್ಲಿಟ್ಟುಕೊಂಡು ರಾಜ್ಯದ ವಿವಿಧ ಜಿಲ್ಲೆಗಳು ಹಾಗೂ ಹೊರರಾಜ್ಯಗಳಿಗೆ 2,400 ವಿಶೇಷ ಬಸ್‌ಗಳ ವ್ಯವಸ್ಥೆ ಮಾಡಿರುವುದಾಗಿ ತಿಳಿಸಿದೆ.ಹೆಚ್ಚುವರಿಯಾಗಿ 270 ರಿಸರ್ವೇಶನ್ ಬಸ್‌ಗಳನ್ನ ನಿಯೋಜಿಸಲಾಗಿದ್ದು, ಬೆಂಗಳೂರಿನಲ್ಲಿ 240 ಬಿಎಂಟಿಸಿ ಬಸ್‌ಗಳನ್ನ



ಕಾರ್ಯಾಚರಣೆಗೆ ಸಿದ್ಧವಾಗಿರಿಸಲಾಗಿದೆ.

ಹಬ್ಬದ ಪ್ರಯಾಣಿಕರ ಅನುಕೂಲಕ್ಕಾಗಿ ಸೆಪ್ಟೆಂಬರ್ 11 ರಿಂದ ಸೆಪ್ಟೆಂಬರ್ 13ರ ವರೆಗೆ ಬೆಂಗಳೂರಿನಿಂದ ವಿವಿಧ ಜಿಲ್ಲೆಗಳು ಹಾಗೂ ಹೊರರಾಜ್ಯಗಳಿಗೆ ವಿಶೇಷ ಬಸ್‌ಗಳು ಸಂಚರಿಸಲಿವೆ. ಮೆಜೆಸ್ಟಿಕ್, ಸ್ಯಾಟಲೈಟ್ (ಮೈಸೂರು ರಸ್ತೆ) ಹಾಗೂ ಶಾಂತಿನಗರ ಬಸ್ ನಿಲ್ದಾಣಗಳಿಂದ ಹೆಚ್ಚುವರಿ ಸೇವೆಗಳನ್ನು ನಿರ್ವಹಿಸಲಾಗುತ್ತದೆ.

ಮಂಗಳೂರು, ಶಿವಮೊಗ್ಗ, ಹುಬ್ಬಳ್ಳಿ, ಬೆಳಗಾವಿ, ವಿಜಯಪುರ, ಕಲಬುರಗಿ ಸೇರಿದಂತೆ ಪ್ರಯಾಣಿಕರ ಬೇಡಿಕೆ ಹೆಚ್ಚಿರುವ ಹಲವು ಪ್ರಮುಖ ಮಾರ್ಗಗಳಿಗೆ ಹೆಚ್ಚುವರಿ ಬಸ್‌ಗಳನ್ನು ನಿಯೋಜಿಸಲಾಗಿದೆ.

# ಇಂದಿನಿಂದ ದೇಶಾದ್ಯಂತ ಸತತ 4 ದಿನ 'ಬ್ಯಾಂಕ್' ಗಳು ಬಂದ್, ATMನಿಂದ ಮುಂಚಿತವಾಗಿ ಕ್ಯಾಶ್ ತೆಗೆದಿಟ್ಟುಕೊಳ್ಳಿ.!

ಯಳಂದೂರು : ಸೆಪ್ಟೆಂಬರ್ 11ರಂದು ಇಂದು ಬ್ಯಾಂಕ್ ಉದ್ಯೋಗಿಗಳ ಮುಷ್ಕರ, ಸೆಪ್ಟೆಂಬರ್ 12ರಂದು ಎರಡನೇ ಶನಿವಾರ, ಸೆಪ್ಟೆಂಬರ್ 13ರಂದು ಭಾನುವಾರ ಹಾಗೂ ಸೆಪ್ಟೆಂಬರ್ 14ರಂದು ಗಣೇಶ ಚತುರ್ಥಿ ಹಿನ್ನೆಲೆಯಲ್ಲಿ ಕೆಲವು ರಾಜ್ಯಗಳಲ್ಲಿ ಬ್ಯಾಂಕ್‌ಗಳು ಸತತ ನಾಲ್ಕು ದಿನ ಬಂದ್ ಆಗಿದೆ . ಬ್ಯಾಂಕ್ ಉದ್ಯೋಗಿಗಳು ಹಾಗೂ ಅಧಿಕಾರಿಗಳು ತಮ್ಮ ಬಹುಕಾಲದ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಸೆಪ್ಟೆಂಬರ್ 11ರಂದು ಇಂದು ದೇಶಾದ್ಯಂತ ಒಂದು ದಿನದ ಮುಷ್ಕರ ಮಾಡುತಿದ್ದು ವಾರಕ್ಕೆ ಐದು ದಿನಗಳ ಕೆಲಸದ ಪದ್ಧತಿ ಜಾರಿ, ಪಿಂಚಣಿ ಸಂಬಂಧಿತ ಸಮಸ್ಯೆಗಳ ಪರಿಹಾರ ಹಾಗೂ ಕಾರ್ಯಕ್ಷಮತೆ ಆಧಾರಿತ ಪ್ರೋತ್ಸಾಹಕ ಯೋಜನೆ ಜಾರಿ ಸೇರಿದಂತೆ ಹಲವು ಬೇಡಿಕೆಗಳನ್ನು ಬ್ಯಾಂಕ್ ಸಂಘಟನೆಗಳು ಮುಂದಿಟ್ಟಿವೆ. ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಜೊತೆಗೆ ಕೆಲವು ಸಹಕಾರಿ ಹಾಗೂ ಗ್ರಾಮೀಣ ಬ್ಯಾಂಕಿಂಗ್ ಸಂಸ್ಥೆಗಳ ಸಿಬ್ಬಂದಿಯೂ ಮುಷ್ಕರದಲ್ಲಿ ಭಾಗವಹಿಸುವ ಸಾಧ್ಯತೆ ಇದೆ. ಇದ–ರಿಂದ ಅಂದು ಬ್ಯಾಂಕ್ ಶಾಖೆಗಳಲ್ಲಿ ನಡೆಯುವ ಸಾಮಾನ್ಯ ಸೇವೆಗಳ ಮೇಲೆ ಪರಿಣಾಮ ಬಿರಿದು ಗ್ರಾಹಕರ ಪರದಾಟ ಉಂಟಾಗಿದೆ.




EDITOR : S VENKATESULU, D.NO.: 4/38, MAIN ROAD, SETTUR, ANANTHAPUR, ANDHRA PRADESH - 515767, PUBLISHER : S VENKATESULU 237, Ward No 22 Talur Road, Lingamma Compund, Bellary, Bellary, Karnataka - 583101. KARNATAKA - 583113.
OWNER : S VENKATESULU D.NO.: 4/38, MAIN ROAD, SETTUR, ANANTHAPUR, ANDHRA PRADESH - 515767. PRINTER: VADDARA DODDA VEERESH, 1ST WARD, NAYAKARA ONI, AGASARA ONI, AT/POST-SOMALAPURA, BELLARY, KARNATAKA - 583101.